ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

ಸುಭಾಷಿತ:




ಕ್ರೋಧದಿಂದ ಬುದ್ಧಿ ದುರ್ಬಲವಾಗುತ್ತದೆ..
ಲೋಭದಿಂದ ಸಂಸ್ಕಾರ ದೂರವಾಗುತ್ತದೆ..
ಮೋಹ ಮರ್ಯಾದೆಯನ್ನು ಕೆಡಿಸುತ್ತದೆ..
ಮದ ಜ್ಞಾನವನ್ನು ನುಂಗಿ ಹಾಕುತ್ತದೆ..
ಮಾತ್ಸರ್ಯ ಅಭಿವೃದ್ಧಿಗೆ ಮಾರಕವಾಗುತ್ತದೆ..
ಅಂಜ ಗೌರವವನ್ನು ಹಾಳು ಮಾಡುತ್ತದೆ..
ಜಂತೆ ಆಯುಷ್ಯವನ್ನು ಕ್ಷೀಣಿಸುತ್ತದೆ..
ಇದ್ಯಾವುದು ಇಲ್ಲದೇ ಜೀವನ ನಡೆಸಿದರೆ..
ಮಾನವನಾಗಿ ಜನಿಸಿದ್ದು ಸಾರ್ಥಕವಾಗುತ್ತದೆ..
ಭಗವಾನ್ ಶ್ರೀಕೃಷ್ಣ

PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 20-11-2026 to 26-11-2026 ಬೆಲೆ:10-00 ಸಂಪುಟ–2 ಸಂಚಿಕೆ–08 ಪುಟಗಳು–6

KANFIDA

ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ(ರಿ)

ಇದು ಎಸ್ ಆರ್ ಪುಟ್ಟಣ್ಣ ಕಣಗಾಲ್ ಅವರು ಮತ್ತು ಹಿರಿಯ ನಿರ್ದೇಶಕರು ಕಟ್ಟಿರುವ ಸಂಸ್ಥೆ



ಬನ್ನಿ ಚಲನಚಿತ್ರ ನಿರ್ದೇಶಕರೇ ಸದಸ್ಯರಾಗೋಣ

KARNATAKA FILM DIRECTOR'S ASSOCIATION (R)
No-10, 'A' 1st Floor, N S Bhavan,
4th cross, 4th main, Gandhinagar, Bangaloru-560009
Phone: 080-48664455 mob- 74111 96766
email: kanfida2023@gmail.com
ಕನ್ನಡ ಬಳಸಿ ಚಿತ್ರರಂಗ ಉಳಿಸಿ

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ

www.karavalitharangini.com

ಕರಾವಳಿ ತರಂಗಿಣಿ
ಮಂಗಳೂರು



ಬೇಸಿಗೆಯ ಬಿಸಿಲು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ನೀರಿನ ಮೂಲಗಳು ಬತ್ತಿಹೋಗಲು ಪ್ರಾರಂಭವಾಗಿದೆ. ಪ್ರತಿಯೊಂದು ಹನಿ ನೀರೂ ಅಮೂಲ್ಯ ಎಂಬುದನ್ನು ನಾವು ಅರಿಯಬೇಕಿದೆ. ಹಲ್ಲುಜ್ಜುವಾಗ, ಪಾತ್ರೆ ತೊಳೆಯುವಾಗ ನಲ್ಲಿಯನ್ನು ಅನಗತ್ಯವಾಗಿ ತೆರೆದಿಡಬೇಡಿ. ವಾಹನಗಳನ್ನು ತೊಳೆಯಲು ಪೈಪ್ ಬದಲು ಬಕೆಟ್ ಬಳಸಿ. ಅಡುಗೆ ಮನೆಯಲ್ಲಿ ತರಕಾರಿ ತೊಳೆದ ನೀರನ್ನು ಗಿಡಗಳಿಗೆ ಹಾಕಿ. ಮನೆಯ ನಲ್ಲಿಗಳಲ್ಲಿ ನೀರು ಸೋರುತ್ತಿದ್ದರೆ ತಕ್ಷಣ ಸರಿಪಡಿಸಿ. ಇಂದು ನಾವು ಉಳಿಸುವ ಒಂದು ಹನಿ ನೀರು, ನಾಳೆಯ ನಮ್ಮ ಭವಿಷ್ಯವನ್ನು ಬೆಳಗಬಲ್ಲದು. ನೀರನ್ನು ಮಿತವಾಗಿ ಬಳಸಿ, ಜೀವಸಂಕುಲವನ್ನು ಉಳಿಸಿ.

ಜನಸ್ನೇಹಿ ಪೊಲೀಸ್ ವ್ಯವಸ್ಥೆ

–ಎನ್.ಶಶಿಕುಮಾರ್



ಮಂಗಳೂರು: ಪಶ್ಚಿಮ ವಲಯದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ಒಂದೇ ತಂಡವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಜನಸ್ನೇಹಿ ಪೊಲೀಸ್ ವ್ಯವಸ್ಥೆ ಮತ್ತು ಅತ್ಯಂತ ಶಾಂತಿಯುತ ವಾತಾವರಣ ನಿರ್ಮಾಣ ಮಾಡುವ ಎಲ್ಲಾ ಪ್ರಯತ್ನಗಳನ್ನು ಇಲಾಖೆಯ ವತಿಯಿಂದ ಮಾಡಲಾಗುವುದು ಎಂದು ಪಶ್ಚಿಮ ವಲಯದ ನೂತನ ಪೊಲೀಸ್ ಮಹಾನಿರೀಕ್ಷಕರಾಗಿ ಅಧಿಕಾರ ಸ್ವೀಕರಿಸಿದ ಹಿರಿಯ ಐಪಿಎಸ್ ಅಧಿಕಾರಿ ಎನ್. ಶಶಿಕುಮಾರ್ ತಿಳಿಸಿದ್ದಾರೆ. ಮಂಗಳೂರು ನಗರ ಪೊಲೀಸ್ ಆಯುಕ್ತರಾದ ಸುಧೀರ್ **3ನೇ ಪುಟಕ್ಕೆ**

ದಲಿತರ ಸ್ಥಿತಿಗೆ ಖರ್ಗೆ ಕುಟುಂಬವೇ ಹೊಣೆ: ಎಚ್ಡಿಕೆ



ಬೆಂಗಳೂರು: ದಲಿತರ ಇಂದಿನ ಶೋಚನೀಯ ಸ್ಥಿತಿಗೆ ದಶಕಗಳ ಕಾಲ ಅಧಿಕಾರ ಸವಿದ ತಂದೆ–ಮಗ (ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ್ ಖರ್ಗೆ) ನೇರ ಕಾರಣ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಇವರು ಶೋಷಿತರು ಹಾಗೂ ದಲಿತರ ಪರವಾಗಿ ಗಟ್ಟಿಯಾದ ಧ್ವನಿಯಾಗದೆ ಏನು ಕೆಲಸ ಮಾಡಿದರು ಎಂದು ಕುಮಾರಸ್ವಾಮಿ ನೇರವಾಗಿ ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ, ನಾಡಿನಲ್ಲಿ ದಲಿತರಿಗೆ ಇಂದಿಗೂ ದೇವಸ್ಥಾನಗಳಿಗೆ ಪ್ರವೇಶವಿಲ್ಲ ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗೆ ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಅವರಿಗೆ ದೇವಸ್ಥಾನ ಪ್ರವೇಶ ನಿರಾಕರಿಸಿದ ವಿಚಾರ ರಾಜ್ಯಾದ್ಯಂತ **3ನೇ ಪುಟಕ್ಕೆ**

ಎಣ್ಣೆಯೊಳಗಿನ ವಿಷದ ಜಾಲ: ಕಾನೂನು ಅಸ್ತ್ರ?

ಮಂಗಳೂರು: ಹೊರಗಡೆ ಬೀದಿಬದಿಯಲ್ಲಿ ಅಥವಾ ಹೋಟೆಲ್‌ಗಳಲ್ಲಿ ಬಿಸಿಬಿಸಿಯಾಗಿ ಕರಿದ ಬಜ್ಜಿ, ಬೋಂಡಾ, ವಡೆ, ಚಿಪ್ಸ್ ಸವಿಯುವ ಮುನ್ನ ಒಮ್ಮೆ ಯೋಚಿಸಬೇಕಾಗಿದೆ. ಬಾಣಲೆಯಲ್ಲಿ ಕುದಿಯುತ್ತಿರುವ ಆ ಎಣ್ಣೆ ನಿಜಕ್ಕೂ ಶುದ್ಧವಾಗಿದೆಯೇ ಅಥವಾ ಒಮ್ಮೆ ಬಳಸಿ ಬಿಸಾಡಬೇಕಾದ, ರಾಸಾಯನಿಕ ಬೆರೆಸಿ ಮತ್ತೆ 'ಹೊಸದರಂತೆ' ಮಾಡಲಾದ ವಿಷಕಾರಿ ಎಣ್ಣೆಯೇ? ಎನ್ನುವ ಸಂಶಯ ಬರುವ ಸಮಯ ಇದಾಗಿದೆ. ರಾಜ್ಯಾದ್ಯಂತ ಸದ್ದಿಲ್ಲದೆ ಬೇರು ಬಿಟ್ಟಿರುವ 'ಅಡುಗೆ ಎಣ್ಣೆ ಮರುಬಳಕೆ ಮಾಫಿಯಾ'ಜನಸಾಮಾನ್ಯರ **3ನೇ ಪುಟಕ್ಕೆ**



ಶುಭಾಶಯಗಳೊಂದಿಗೆ...

ಎಸ್‌ಸಿಡಿಸಿಸಿ ಬ್ಯಾಂಕ್



112 ವರ್ಷಗಳ ಸಾರ್ಥಕ ಸೇವೆಯಲ್ಲಿ...

ಪೂರ್ಣ ಭರವಸೆಯ ₹21,000 ಕೋಟಿ ವ್ಯವಹಾರ

ಡಿಜಿಟಲ್ ಬ್ಯಾಂಕಿಂಗ್
ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ



ಠೇವಣಿಗಳಿಗೆ ಆಕರ್ಷಕ ಬಡ್ಡಿದರ
ಠೇವಣಿಗಳು RBIನ DICGC ವಿಮಾ ಭದ್ರತೆ ಹೊಂದಿರುತ್ತದೆ.
9%*

ಕಡಿಮೆ ಬಡ್ಡಿದರದಲ್ಲಿ ವಾಹನ ಸಾಲ



ಕಡಿಮೆ ಬಡ್ಡಿದರದಲ್ಲಿ ಚಿನ್ನಾಭರಣ ಈಡಿನ ಸಾಲ
ಕನಿಷ್ಠ ಬಡ್ಡಿದರದಲ್ಲಿ ತ್ವರಿತ ಸೇವೆಯೊಂದಿಗೆ ಗರಿಷ್ಠ ಸಾಲ



ಕಡಿಮೆ ಬಡ್ಡಿದರದಲ್ಲಿ ಗೃಹ ಸಾಲ



ಶ್ರೀ ವಿನಯ ಕುಮಾರ್ ಸೂರಿಂಜೆ
ಉಪಾಧ್ಯಕ್ಷರು

ಶ್ರೀ ಕೆ. ಗೋಪಾಲಕೃಷ್ಣ ಭಟ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಹಾಗೂ ಆಡಳಿತ ಮಂಡಳಿ ನಿರ್ದೇಶಕರು

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.
SCDCC BANK LTD.
H.O. MANGALORE
ಪ್ರಧಾನ ಕಛೇರಿ: 'ಉತ್ಕರ್ಷ ಸಹಕಾರಿ ಸೌಧ', ಕೊಡಿಯಾಲ್‌ಬೈಲ್, ಮಂಗಳೂರು - 3
ದೂರವಾಣಿ: 0824-2440381, 2440882, 2441341, 2441243

ROHAN CORPORATION

CREDAI MANGALORE

APPROVED RERA APPROVED



ROHAN PARK

KOTEKAR-BEERI, MANGALORE

STARTING FROM
₹65 LAKHS*
2 & 3 BHK PREMIUM APARTMENTS

- CLOSE TO THE BEACH
- NH-66 ACCESS
- PREMIUM AMENITIES

*T&C Apply

FOR BOOKINGS CALL
+91 98456 07727 / 98456 07725

ಸಂಪ್ರದಾಯ

ಕೊರವಂಜಿ ಕೋಲಾಟ



ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವಂತಹ ವಿಶೇಷ ಕಲೆ ಕೊರವಂಜಿ ಕೋಲಾಟ. ಇದು ಮೈಸೂರು, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗದ ಕಡೆಗಳಲ್ಲಿ ಕಾಣಬಹುದಾಗಿದೆ. ಹಾಡು ಮತ್ತು ಕುಣಿತದೊಂದಿಗೆ ಸಂಭಾಷಣೆಯು ಈ ಕಲೆಯಲ್ಲಿ ಸೇರಿಕೊಂಡಿರುತ್ತದೆ. ಕೃಷ್ಣ ಕಥೆಯಲ್ಲಿ ಸತ್ಯಭಾಮ ಸ್ವರ್ಗದಲ್ಲಿದ್ದ ಪಾರಿಜಾತ ಗಿಡವನ್ನು ಭೂಲೋಕಕ್ಕೆ ತರಿಸಿದ ಚಂಡಿ ಕಥೆ ಜನಪದೀಯವಾಗಿದೆ. ಚಂಡಿ ಎನಿಸಿದ ಸತ್ಯಭಾಮಳನ್ನು ಮುಖ್ಯ ಪಾತ್ರವಾಗಿಟ್ಟುಕೊಂಡು ಅವಳಿಗಾಗಿ ಕೃಷ್ಣ ಬೆಸ್ತ ಬೀಳುವುದನ್ನು ತಮ್ಮದೇ ಆದ ರೀತಿಯಲ್ಲಿ ನಿರೂಪಿಸುವ ಕ್ರಮವು ಈ ಕಲೆಯಲ್ಲಿದೆ. ಹಳ್ಳಿಗಳಲ್ಲಿ ಈಗ ಹೇಳುವವರು ಗಂಡಸಾದರೆ ಕೊರಮ ಎಂತಲೂ, ಹೆಂಗಸಾದರೆ ಕೊರಮಿ ಎಂತಲೂ ಕರೆಯುತ್ತಾರೆ. ಕೊರವಂಜಿಗೆ ಕರಿಪಟ್ಟಿಯ ರುಮಿ, ಮೋಣಕಾಲಿನವರಿಗೆ ಕಂಬಿಸೀರೆ, 'ಜಾಳಿ ಕಾಯಿ' ಎನ್ನುವ ಸೊಂಟದ ಗಂಟಿಗೆ ಒಂದು ಪುಡಿಟೀಲು, ಹಣೆಗೆ ಅಗಲವಾದ ಕುಂಕುಮ, ದವಡೆಯಲ್ಲಿ ಎಲೆ ಅಡಿಕೆ ತಲೆಯ ಎಡಭಾಗಕ್ಕೆ ವಿಡಿಗಂಟು, ಕಂಕುಳಲ್ಲಿ ಅಥವಾ ತಲೆಯ ಮೇಲೆ ಬೇವಿನ ಸೊಪ್ಪು ಹೆಡಿಗೆ, ಕಾಲಿಗೆ ಗೆಜ್ಜೆ. ಎಲಗೈಯಲ್ಲಿ ಕಣಿ ಕೋಲು ಹಿಡಿದು ಕಣಿ ಹೇಳುವ ಕೊರಮಿಯನ್ನು ಸೃಷ್ಟಿಸುತ್ತಾರೆ. ಕೊರಮ ಸಾಮಾನ್ಯವಾಗಿ ಒಂದು ನಿಲುವಂಗಿ, ಸೊಂಟಕ್ಕೆ ಕಟ್ಟಿದ ವಸ್ತ್ರ ಬರುಗಟ್ಟಿದ ಪಂಚೆ, ಹಣೆಯಲ್ಲಿ ಗೀರುನಾಮ, ತಲೆಗೆ ಸುತ್ತಿದ ಒಂದು ವಸ್ತ್ರ, ಕಾಲಿಗೆ ಗೆಜ್ಜೆ, ಕೈಯಲ್ಲಿ ಒಂದು ಬಿದಿರಿನ ದೊಣ್ಣೆ ಹಿಡಿದಿರುತ್ತಾನೆ. ಸಾಮಾನ್ಯವಾಗಿ ಕೋಲಾಟದ ವಿವಿಧ ಆಟಗಳು ಮುಗಿದ ಮೇಲೆಯೇ ಕೊರವಂಜಿ ಕೋಲು ಕುಣಿವುದು. ಅದರ ಮುಖ್ಯ ಕಥೆ ಹೀಗೆ ಸಾಗುತ್ತದೆ. ಪ್ರಾರಂಭದಲ್ಲಿ ಎರಡು ಸಾಲಿನಲ್ಲಿ ಐಳತ ಕೋಲಾಟಗಾರರು 'ತಾಳಗಟುಕ' ಹಾಕುತ್ತಾರೆ. ಆಟದ ಓಣಿಯಲ್ಲಿ ಕೊರವಂಜಿ ಕಣಿ ಹೇಳುವವಳಂತೆ ಬರುತ್ತಾಳೆ. ಇವಳ ಕಣಿ ಹಾಡಿನ ರೂಪಕ್ಕೆ ತಿರುಗುತ್ತದೆ. ಕಣಿಯನ್ನು ಕೇಳಿ ಎದುರಾದ ಕೊರಮ ಇವಳನ್ನು ಕುರಿತು ತನಗೆ ಮತ್ತು ಊರಿಗೆ ಕಣಿ ಹೇಳಲು ಕೇಳುತ್ತಾನೆ.

ಸಂಪಾದಕೀಯ

ಕರಾವಳಿ ತರಂಗಿಣಿ




"ಹೆಣ್ಣೆಂದೂ ಅಬಲೆಯಲ್ಲ ಸಬಲೆ"

– ಲಲಿತಶ್ರೀ ಪ್ರೀತಮ್ ರೈ

"ಯತ್ರನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ" "ಕಾರ್ಯೇಷು ದಾಸಿ, ಸಲಹೇಷು ಮಂತ್ರಿ, ಭೋಜೇಷು ಮಾತ, ಶಯನೇಷು ರಂಭಾ ನಾರಿ ಕ್ಷಮಯಾಧರಿತ್ರಿ" ಎಂತಹ ಕಲ್ಪನೆ ನೋಡಿ ನಮ್ಮ ಹಿರಿಯರದ್ದು. ವೇದಗಳ ಕಾಲದಲ್ಲಿದ್ದ ಗಾರ್ಗಿ, ಮೈತ್ರೆಯಿಯರ ಬೌದ್ಧಿಕ ಸಾಧನೆ ನಾವು ಕೇಳಿದ್ದೇವೆ. ಪುರಾಣಗಳಲ್ಲಿ ದುಷ್ಪಶಿಕ್ಷಕಿಯಾಗಿ, ಶಿಷ್ಟರಕ್ಷಕಿಯಾದ ಸರ್ವಶಕ್ತಿಯನ್ನು ಹೆಣ್ಣಿನಲ್ಲಿ ಕಂಡಿದ್ದೇವೆ. ಮನುಸ್ಮೃತಿಯಲ್ಲಿ "ಯತ್ರನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ" ಅಂದರೆ ಎಲ್ಲಿ ಸ್ತ್ರಿಯನ್ನು ಗೌರವಿಸಲಾಗುವುದೋ ಅಲ್ಲಿ ದೇವತೆಗಳು ನೆಲೆಸಿದಂತೆ ಎಂದಿದ್ದಾನೆ. ಆದರೆ ಮನುವಿನ ದೃಷ್ಟಿಯಲ್ಲಿ ಮಹಿಳೆ ಶಿಕ್ಷಣವನ್ನು ಕಲಿಯುವುದು ಸರಿಯಲ್ಲ. ಗುಲಾಮಳಾಗಿಯೇ ಅವಳು ಸಮಾಜದಲ್ಲಿ ಮುಂದುವರಿಯಬೇಕಿತ್ತು. ಅವಳು ಅಕ್ಷರಲೋಕ ಪ್ರವೇಶ ಮಾಡಿದರೆ ಹೊರಗಡೆ ಜಗತ್ತಿನಲ್ಲಿ ನಡೆಯಬಹುದಾದ ವಿಷಯ ತಿಳಿದು ಮುಂದುವರೆದರೆ ಪುರುಷನ ತೋಳತೆಕ್ಕೆಯಿಂದ ದೂರಹೋಗಿ ಸ್ವಚ್ಛಂದವಾಗಿ ವಿಹರಿಸಿ, ಸ್ವಂತವಾಗಿ ವಿಚಾರ ಮಾಡಿ ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡು ಸಬಲಳಾಗುತ್ತಾಳೆ ಎನ್ನುವುದು ವಾದವಾಗಿತ್ತು. ಒಂದು ಜೀವವನ್ನು ಒಂಬತ್ತು ತಿಂಗಳು ಹೊತ್ತು ಹತ್ತು ಸಲಹುವ ಶಕ್ತಿ ಮಹಿಳೆಯಲ್ಲಿದೆ ನಿಜ ಹಾಗೆ ಅವಳಲ್ಲಿ ಮಾತೃ ಶಕ್ತಿ, ವಾತ್ಸಲ್ಯ, ಸಹನೆ, ಪ್ರೀತಿ, ಪ್ರೇಮ, ಅರ್ಪಣೆ, ಸತ್ಕಾರ, ಸನ್ಮಾನ, ಸಾಂತ್ವನ ಗುಣಗಳು ಹುಟ್ಟಿನಿಂದಲೇ ಬಂದುಬಿಡುತ್ತದೆ. ಕುಟುಂಬ ನಿರ್ವಹಣೆ, ಅಡುಗೆ ಮಾಡುವ ಜವಾಬ್ದಾರಿ ಅನಾದಿ ಕಾಲದಿಂದಲೂ ಹೆಣ್ಣಿಗೆ ಬಂದಿರುವುದರಿಂದ ಸಣ್ಣ ವಯಸ್ಸಿನಿಂದಲೇ ಅಕಿಗೆ ಹಲವಾರು ಕಟ್ಟುಪಾಡುಗಳನ್ನು ಹಾಕಲಾಗಿದೆ. ಸ್ವತಂತ್ರ ರೀತಿಯಲ್ಲಿ ಮನೆಯಿಂದ ಹೊರಗೆ ಹೋಗಿ ವ್ಯವಹಾರ ನಡೆಸುವುದು ಪುರುಷ ಪ್ರಧಾನ ಸಮಾಜದಲ್ಲಿ ಅತ್ಯಂತ ಕಷ್ಟವೇ ಆಗಿತ್ತು ಮತ್ತು ಆಗಿದೆ ಕೂಡ. ಜಾಗತೀಕರಣದಿಂದ ಮಹಿಳೆ ಅನೇಕ ಪ್ರಯೋಜನ ಪಡೆದಿದ್ದರೂ, ಶೋಷಣೆಯಿಂದ ಮುಕ್ತವಾಗಿಲ್ಲ. ಹೆಣ್ಣಿನ ವಿರುದ್ಧ ನಡೆಯುತ್ತಿರುವ ಕಿರುಕುಳ, ಹಾರಕಮ್ಮ, ಅವಮಾನ, ಅಗೌರವ, ಅತ್ಯಾಚಾರ ಮೊದಲಾದ ಅನ್ಯಾಯಗಳು ಹತೋಟಿಗೆ ಬರಬೇಕಾದರೆ ಸಮಾಜದಲ್ಲಿ ಗಂಡು ಹೆಣ್ಣಿನ ನಡುವಿನ ತಾರತಮ್ಯ ಹೋಗಬೇಕು. ಹೆಣ್ಣು ಭೋಗದ ವಸ್ತು ಎನ್ನುವ ಭ್ರಮೆಯಿಂದ ಗಂಡು ಹೊರಬರಬೇಕು. ಬಡ ಕುಟುಂಬಕ್ಕೆ ಸೇರಿದ ಹೆಣ್ಣು ಮಕ್ಕಳು ಗಂಡಿನಿಂದ ಅವಮಾನಿತರಾಗಿ, ಅತ್ಯಾಚಾರಕ್ಕೀಡಾದಾಗ ಠಾಣೆಯ ಮೆಟ್ಟಿಲು ಹತ್ತಲು ಭಯ ಬೀಳುತ್ತಾರೆ ಕಾರಣ ಮತ್ತೆ ಠಾಣೆಯಲ್ಲಿ ಅವಳಿಗೆ ಆಗಬಹುದಾದ ಅವಮಾನ. ಇದಕ್ಕೆಲ್ಲಾ ಕಾರಣವಾಗುವುದು ಆರೋಪಿತನ ಆರ್ಥಿಕ ಮತ್ತು ಸಾಮಾಜಿಕ ಒನ್ನಲೆಯ ಪ್ರಭಾವದಿಂದ ಪ್ರಭಾವಿತರಾದ ಪೊಲೀಸ್ ಅಧಿಕಾರಿಗಳು. ಅಲ್ಲಿಂದ ಮುಂದುವರಿದು ಕೋರ್ಟಿನ ಮೆಟ್ಟಿಲು ಹತ್ತಿದಾಗ ಮತ್ತೆ ಅದೇ ಅವಮಾನ ಆರೋಪಿಯ ಪರವಾದ ವಕೀಲರಿಂದ. ಈ ನಡುವೆ ನಾನು ಕೋರ್ಟ್‌ಒಂದರಲ್ಲಿ ಮಹಿಳೆಯನ್ನು ಬೇಟಿಯಾಗುವ ಸಂದರ್ಭ ಬಂತು ಮಾತಾಡುತ್ತಾ ಮಹಿಳೆ ಕೋರ್ಟಿಗೆ ಬಂದಿರುವ ಉದ್ದೇಶ ಕೇಳಿದೆ. ಮಹಿಳೆ ಮಾತನಾಡುತ್ತಾ "ಶ್ರೀಮಂತ ವ್ಯಕ್ತಿಯೊಬ್ಬನಿಂದ ಲೈಂಗಿಕವಾಗಿ ಹಿಂಸೆಯಾದಾಗ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಬೇಕಾಯಿತು. ಆದರೆ ಆಮೇಲೆ ತಿಳಿಯಿತು ಹೆಣ್ಣು ಮಕ್ಕಳಿಗೆ ಈ ಸಮಾಜದಲ್ಲಾಗಲಿ ಅಥವಾ ಕೋರ್ಟ್ ಕಛೇರಿಗಳಲ್ಲಾಗಲಿ ನ್ಯಾಯ ಸಿಗಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಹಣದ ಮದದಿಂದ ಕೇಲಾಡುತ್ತಿರುವ ಕಾಮಾಂದರ ಹತ್ತಿರ ಇರುವ ದುಡ್ಡಿಗೆ ಆಸೆ ಪಡುವ ನೀಚ ಪೊಲೀಸ್ ಅಧಿಕಾರಿಗಳಾಗಲಿ, ವಕೀಲರುಗಳಾಗಲಿ ಇರುತ್ತಾರೋ ಅಲ್ಲಿಯವರೆಗೆ ಹೆಣ್ಣಿಗೆ ನ್ಯಾಯ ಮರೀಚಿಕೆಯಷ್ಟೆ, ಅದಕ್ಕೆ ಇದಬೇಕು ಇಂತಹ ಪಾಪಿಗಳಿಂದ ಅವಮಾನ, ಅತ್ಯಾಚಾರಕ್ಕೆ ಒಳಗಾದಾಗ ಕೆಲವು ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಇನ್ನು ಕೆಲವರು ಅಂತಹ ನೀಚರಿಗೆ ಅಡಿಯಾಳಾಗಿ ಬಿಡುತ್ತಾರೆ. ಇದೆರಡರಲ್ಲೂ ಆಸಕ್ತಿ ಇಲ್ಲದ ನನ್ನಂತವರು ಪಡಬಾರದ ನೋವು, ಅವಮಾನಗಳನ್ನು ಸಹಿಸಿಕೊಂಡು ಬಮಕಬೇಕಾಗುತ್ತದೆ" ಎಂದಾಗ ಅವರ ಮುಖದಲ್ಲಿದ್ದ ನೋವು ಒಬ್ಬ ಹೆಣ್ಣಾಗಿ ಗುರುತಿಸದಿರಲು ಸಾಧ್ಯವಾಗಲಿಲ್ಲ. ಒಲಿದರೆ ನಾರಿ, ಮುನಿದರೆ ಮಾರಿ, ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು, ಕಲಿತ ಹೆಣ್ಣು ಮನೆಯ ಕಣ್ಣು, ಅಕ್ಷರ ಕಲಿತ ನಾರಿ ದೇಶದ ಪ್ರಗತಿಗೆ ದಾರಿ ಎಂದೆಲ್ಲಾ ನಮ್ಮ ಹಿರಿಯರು ಹೇಳುತ್ತಾ ಬಂದಿರುವುದು ನಿಜ. ಆದರೆ ಈ ಹೆಣ್ಣು ಮನೆಯಿಂದ ಹೊರಗೆ ಬಂದು ತಾನು ಸಾಧನೆಯ ಹಾದಿಯಲ್ಲಿ ನಡೆಯುತ್ತಿರಬೇಕಾದರೆ ಗಂಡಿನಿಂದ ಆಗುತ್ತಿರುವ ಅವಮಾನ, ಅತ್ಯಾಚಾರಕ್ಕೆ ಅವಳಿಗೆಲ್ಲಿ ಸಿಗುತ್ತಿದೆ ನ್ಯಾಯ? ದೇಶದ ಶೇ.50ರಷ್ಟು ಮಹಿಳೆಯರು ಈ ಸಮಾಜದಲ್ಲಿ ಗಂಡಿನಿಂದ ಒಂದಿಲ್ಲೊಂದು ಅವಮಾನಗಳನ್ನು ಎದುರಿಸುತ್ತಾ ದಿನಗಳನ್ನು ಕಳೆಯುತ್ತಿದ್ದಾರೆ. ಪುರುಷರಿಗೆ ಸಮಾನವಾಗಿ ಮಹಿಳೆಯರು ಬೆಳೆದಿದ್ದರೂ ಹೆಣ್ಣನ್ನು ಕೇವಲ ಒಂದು ಮನರಂಜನೆಯ ವಸ್ತುವನ್ನಾಗಿ ಬಳಸಿಕೊಳ್ಳುವ ಪ್ರವೃತ್ತಿ ಇಂದಿಗೂ ಮುಂದುವರಿದಿದೆ. ಹೆಣ್ಣಿಗೆ ಸಮಾನ ಹಕ್ಕು ಎಂದು ಕೂಗಿ ಹೇಳುವ ಜನರ ಮನೆಯಲ್ಲಿಯೇ ಮಹಿಳೆಗೆ ನ್ಯಾಯ ದೊರಕದ ಎಷ್ಟೋ ನಿದರ್ಶನಗಳು ದೀಪದ ಕೆಳಗಿನ ಕತ್ತಲೆ ಎಂಬಂತಾಗಿದೆ. ಇವೆಲ್ಲದರ ನಡುವೆ "ಹೆಣ್ಣು ಅಬಲೆಯಲ್ಲ ಸಬಲೆ" ಎಂದು ಕೂಗಿ ಹೇಳಿ ಹೊರಟಿರುವ ಹೆಣ್ಣಿನ ಮಾನಸ್ಸಿನ ಅಂಚಿನಲ್ಲಿ ತಾನು ಅಬಲೆಯಾಗಿಯೇ ಬದುಕುತ್ತಿದ್ದೇನೆ ಅಲ್ಲವೇ ಎನ್ನುವ ಅಳುಕು ಇದ್ದೆ ಇದೆ. ಇದು ವಾಸ್ತವ ಕೂಡ.....

ದೈವಾರಾಧನೆ



ಶ್ರೀ ಕ್ಷೇತ್ರ ಕೊಂಡಾಣ

ತುಳುನಾಡಿನ ಮಣ್ಣಿನಲ್ಲಿ ದೈವಗಳನ್ನು ವಿಶೇಷ ನಿಷ್ಠೆಯಿಂದ ಪೂಜಿಸುವುದನ್ನು ನಾವು ನೋಡಬಹುದು. ಇದಕ್ಕೆ ಕಾರಣ ದೈವಗಳ ಕಾರ್ಣಿಕ. ಅಂತಹ ದೈವಸ್ಥಾನಗಳಲ್ಲಿ ಕೊಂಡಾಣ ಶ್ರೀ ಖಿಲಿಚಾಮುಂಡಿ, ಬಂಟ, ಮುಂಡತ್ತಾಯ ದೈವಸ್ಥಾನವು ತುಳುನಾಡಿನ ಅತ್ಯಂತ ಕಾರ್ಣಿಕ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದು ಅದೆಷ್ಟೋ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಿದೆ. ಎಲ್ಲೋ ಇದ್ದು ತಮ್ಮ ಕಷ್ಟಗಳನ್ನು, ಇಲ್ಲಿನ ದೈವಗಳನ್ನು ನೆನೆಸಿ ಹರಕೆ ಕಟ್ಟಿಕೊಂಡರೆ ಅದಷ್ಟು ಬೇಗನೆ ಅಂದುಕೊಂಡ ಕಾರ್ಯವನ್ನು ಈಡೇರಿಸುವ ದೈವವಾಗಿದೆ. ಈ ಕ್ಷೇತ್ರವು ಮಂಗಳೂರು ತಾಲ್ಲೂಕು, ಕೋಟೆಕಾರ್ ಗ್ರಾಮದ ಕೊಂಡಾಣ ಎಂಬಲ್ಲಿದೆ. ಶ್ರೀ ಕ್ಷೇತ್ರಕ್ಕೆ ಸೋಮೇಶ್ವರ ಸೋಮನಾಥ ದೇವರು, ತಲಪಾಡಿ ಶ್ರೀ ದುರ್ಗಾಪರಮೇಶ್ವರೀ ಹಾಗು ಉದ್ಯಾವರ ಮಾಡದ ಅರಸು ದೈವಗಳಿಗು ಸಂಬಂಧವಿದೆ ಎಂದೂ ಹೇಳಲಾಗುತ್ತದೆ. ಈ ಕ್ಷೇತ್ರವು ಎತ್ತರದ ಸ್ಥಳದಲ್ಲಿದ್ದು ಸುಂದರ ವಾತಾವರಣದ ಮಧ್ಯೆ ಇದೆ. ಶ್ರೀ ಕ್ಷೇತ್ರದಲ್ಲಿ ಖಾಮುಂಡಿಯ ವಾಹನವಾಗಿರುವ ಹುಲಿಯ ಸಂಚಾರವಿದ್ದು, ಹುಲಿಯು ನೋಡಲು ಸಿಕ್ಕಿರುವ ವಿಕಯವನ್ನು ಹಿರಿಯರು ಹೇಳುತ್ತಾರೆ. ಹಿಂದೂ ಧರ್ಮದ ಜನರು ಮಾತ್ರವಲ್ಲದೆ ಮುಸ್ಲಿಮ್ ಸಾಮುದಾಯದವರು ಕೂಡಾ ಹುಲಿಯನ್ನು ನೋಡಿರುವುದರಿಂದ ಎಲ್ಲಾ ಧರ್ಮದವರು ಈ ಕ್ಷೇತ್ರಕ್ಕೆ ಬರುವುದು ಸಾಮನ್ಯವಾಗಿದೆ. ಕ್ಷೇತ್ರದ ಪಕ್ಕದ ಸ್ಥಳದಲ್ಲಿ ಸಣ್ಣ ಕೆರೆಯಿದ್ದು, ಇದು ಹುಲಿ ನೀರು ಕುಡಿಯುವ ಕೆರೆಯಾಗಿದೆ. ಈ ಕೆರೆಗೆ ಯಾರು ಕೂಡಾ ಇಳಿಯುವ ಹಾಗೆ ಇಲ್ಲ. ಹುಲಿಯು ಸೋಮೇಶ್ವರ ಸೋಮನಾಥ ದೇವರ ಭೇಟಿಗೆ ಹೋಗುತ್ತದೆ ಎನ್ನುವ ಕಥೆಯನ್ನು ಕೂಡ ಹಿರಿಯರು ಹೇಳುವುದನ್ನು ಕೇಳಬಹುದು. ಕೊಂಡಾಣದ ವಾರ್ಷಿಕ ಜಾತ್ರೆಯು ಕೊಂಡಾಣ ಬಂಡಿ ಎಂದೇ ಪ್ರಸಿದ್ಧವಾಗಿದ್ದು, ಇದು ತುಳುನಾಡಿನ ಕೊನೆಯ ಜಾತ್ರೆಯಾಗಿದೆ. ಇಲ್ಲಿನ ಜಾತ್ರೆ ಪ್ರತೀ ವರ್ಷ ಮೇ ತಿಂಗಳ 22 ಹಾಗು 23 ರಂದು ನಡೆಯುತ್ತದೆ. ಇಲ್ಲಿನ ಜಾತ್ರೆಯ ಮರುದಿವಸ ಪತ್ತನಾಜೆಯಾಗಿದ್ದು ನಂತರ ತುಳುನಾಡಿನಲ್ಲಿ ಎಲ್ಲಿಯೂ ಕೂಡಾ ಧ್ವಜಾರೋಹಣವಾಗಿ ಜಾತ್ರೆಯಾಗುವ ಪದ್ಧತಿ ಇಲ್ಲ. ಈ ಕ್ಷೇತ್ರದ ಕೀರ್ತಿ ಎಷ್ಟೆಂದರೆ ದೇಶದಲ್ಲಿಯೇ ಅಂತಿಮ ತೀರ್ಪನ್ನು ನೀಡುವ ದೆಹಲಿಯ ಸುಪ್ರೀಮ್ ಕೋರ್ಟ್ ನಲ್ಲಿ ಮುಗಿಯದ ಕೇಸು ಕೊಂಡಾಣದಲ್ಲಿ ತೀರ್ಮಾನ ವಾಗಿದೆ ಎನ್ನುವ ಮಾತು ಕೂಡ ಇದೆ. ಶ್ರೀ ಕ್ಷೇತ್ರ ದ ಜಾತ್ರೆಯನ್ನು ಅಷ್ಟೋಂದು ದೊಡ್ಡ ರೀತಿಯಲ್ಲಿ ಮಾಡುವ ಪದ್ಧತಿ ಇಲ್ಲ ಎಂಬುದು ಹಿರಿಯರ ನಂಬಿಕೆ. ಯಾವುದೇ ದೈವ ಸಾನಿಧ್ಯದಲ್ಲಿ ಕಾಣಸಿಗದ ಬಂಟ ಕಲ್ಲು ಕೊಂಡಾಣದಲ್ಲಿ ನೋಡಬಹುದಾಗಿದೆ. ನೇಮದ ಸಂದರ್ಭ ದೈವವು ಬಂಟಕಲ್ಲಿನ ಜಾಣಿತೋಕದಲ್ಲಿ ಕುಳಿತು ಕೊಳ್ಳುವ ಪದ್ಧತಿ ಇದೆ. ಈ ಸಂದರ್ಭ ಶಿವಲಿಂಗಕ್ಕೆ ಮಲ್ಲಿಗೆ ಹೂವಿನ ಅಭಿಷೇಕ ಅಂದರೆ ಮಲ್ಲಿಗೆ ಹೂವಿನಿಂದ ಬಂಟಕಲ್ಲನ್ನು ಅಲಂಕರಿಸುತ್ತಾರೆ. ಮಾತು ಬರದ ಅದೆಷ್ಟೋ ಮಕ್ಕಳಿಗೆ ಇಲ್ಲಿಗೆ ಹರಕೆ ಹೇಳಿದ ನಂತರ ಮಾತು ಬಂದ ಘಟನೆಯೂ ನಡೆದಿದೆ. ಕ್ಷೇತ್ರದ ಒಳಗೆ ಯಾವುದೇ ರೀತಿಯ ವೀಡಿಯೋ ಚಿತ್ರೀಕರಣ, ಫೋಟೋ ಚಿತ್ರೀಕರಣ ಕಡ್ಡಾಯವಾಗಿ ಮಾಡುವ ಹಾಗೆ ಇಲ್ಲ. ಐತಿಹಾಸಿಕ ಹಿನ್ನೆಲೆಯ ಪ್ರಕಾರ ಈ ಕ್ಷೇತ್ರವು ಗೋಧ ಶಾಲೆ (ಕುಸ್ತಿ ಶಾಲೆ) ಯಾಗಿದ್ದು, ಇಲ್ಲಿ ಮಲ್ಲ ಯುದ್ಧವನ್ನು ಕಲಿಸಿ ಕೊಡುವ ಪೈಲ್ವಾನ್ ಮಾಸ್ಟರ್ ಇದ್ದನೆಂದು ಹೇಳಲಾಗುತ್ತದೆ. ಕಾಲಕ್ರಮೇಣ ಇದು ದೈವ ಸ್ಥಾನವಾಗಿ ಬದಲಾಯಿತಂತೆ. ಈಗಲೂ ಕೂಡಾ ಇಲ್ಲಿ ಕುಸ್ತಿಯನ್ನು ಕಲಿಸುವ ಪೈಲ್ವಾನ್ ಮಾಸ್ಟರ್‌ನ ಮರದ ಪ್ರತಿಮೆಯಿದೆ. ಈಗ ಈ ಶಾಲೆಯು ನೇಮ (ದೈವ ನೃತ್ಯ)ದ ಕೊಟ್ಟಿಯಾಗಿದೆ. ಜಾತ್ರೆಯ ಮೊದಲ ದಿನ ದೈವದ ಭಂಡಾರ ಇಲ್ಲಿ ಬಂದು ಮೊದಲ ದಿನದ ನೇಮ (ದೈವನೃತ್ಯ) ಇದರೊಳಗೆ ನಡೆಯುತ್ತದೆ. 2ನೇ ದಿನ ದೈವವು ಇಲ್ಲಿ ಸ್ವಲ್ಪ ಹೊತ್ತು ಕುಣಿಯುವ ನಂತರ ದೈವಸ್ಥಾನದ ಅಂಗಣಕ್ಕೆ ಬಂದು ಕುಣಿಯುವ ಪದ್ಧತಿ ಇಲ್ಲಿಯದ್ದಾಗಿದೆ. ಇಷ್ಟೆಲ್ಲಾ ರೀತಿಯ ವೈಶಿಷ್ಟವನ್ನು ಈ ಕ್ಷೇತ್ರ ಹೊಂದಿದೆ. ಕೊಂಡಾಣ ಕ್ಷೇತ್ರವು ಮಂಗಳೂರಿನಿಂದ ಸುಮಾರು 16 ಕಿ.ಮಿ ದೂರದಲ್ಲಿದ್ದು, ಕೇರಳ ಮಂಗಳೂರು ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ 5 ಕಿ.ಮಿ ದೂರದಲ್ಲಿದೆ. ಇಂತಹ ಪುಣ್ಯ ಸ್ಥಾನಕ್ಕೆ ಒಮ್ಮೆ ಬೇಟಿಕೊಟ್ಟು ಪಾವನರಾಗಲು ಮರೆಯದಿರಿ.

ವೈದ್ಯೋನಾರಾಯಣಕೋ ಹರೀ:

ಸಾಂಬ್ರಾಣಿ ಸೊಪ್ಪು



ಕರ್ಪೂರವಳ್ಳಿ, ಕಪ್ಪುರುಳ್ಳಿ, ಓಮವಳ್ಳಿ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ದೊಡ್ಡ ಪತ್ರೆಯನ್ನು ಅನಾದಿಕಾಲದಿಂದಲೂ ಭಾರತೀಯ ಆಯುರ್ವೇದ ಹಾಗೂ ಸಿದ್ಧ ಔಷಧ ಪದ್ಧತಿಯಲ್ಲಿ ಬಳಸುತ್ತಾ ಬಂದಿದ್ದಾರೆ.

ದೊಡ್ಡಪತ್ರೆ ಸಸ್ಯವನ್ನು ಪ್ರತಿಯೊಂದು ಮನೆಯ ಹಿತ್ತಲಲ್ಲಿ ಅಥವಾ ಮಣ್ಣಿನ ಕುಂಡಗಳಲ್ಲಿ ಬೆಳೆಸುವುದಾಗಿದೆ. ಇದು ಕೆಮ್ಮಿಗೆ ರಾಮಬಾಣದಂತೆ ಕೆಲಸ ಮಾಡುತ್ತದೆ.

ಚಿಕ್ಕ ಮಕ್ಕಳಿಗೆ ನೆಗಡಿ ಕೆಮ್ಮು ಕಫ ಇದ್ದರೆ ಒಂದು ಎಲೆಯನ್ನು ಜೇನುತುಪ್ಪದಲ್ಲಿ ಅದ್ದಿ ಅಥವಾ ಅರ್ಧ ಎಲೆಯ ರಸ ಹಿಂಡಿ ಆ ರಸಕ್ಕೆ ಮೂರು ತೊಟ್ಟು ಜೇನುತುಪ್ಪ ಸೇರಿಸಿ ತಿನಿಸಿದರೆ ಬೇಗ ಗುಣವಾಗುತ್ತೆ.

ದೊಡ್ಡಪತ್ರೆಯ 1ಚಮಚ ರಸಕ್ಕೆ ಚಿಟಿಕೆ ಒಪ್ಪಲಿ ಚೂರ್ಣ 1ಚಮಚ ಜೇನುತುಪ್ಪ ಸೇರಿಸಿ ಮೂರ್ನಾಲ್ಕು ದಿನ ಬೆಳಿಗ್ಗೆ, ಸಂಜೆ ಸೇವಿಸುತ್ತಾ ಬಂದರೆ ಎಂತಹ ಜ್ವರ ಇದ್ದರೂ ವಾಸಿಯಾಗುತ್ತೆ.

ದಿನವು ದೊಡ್ಡಪತ್ರೆ ಎಲೆಯ ಚಟ್ನಿ ಮಾಡಿ ಸೇವಿಸುವುದರಿಂದ ಮೂತ್ರಪಿಂಡದಲ್ಲಿನ ಕಲ್ಲುಗಳು ಕರಗಿ ಮೂತ್ರದಲ್ಲಿ ಹೊರ ಬರುತ್ತದೆ. ಹಾಗೇ ಮಧುಮೇಹ ಸಹ ತಹಬಂದಿಗೆ ಬರುತ್ತದೆ.

ಯಸಿವು ಅಜೀರ್ಣ ಸಮಸ್ಯೆ ಇದ್ದರೆ ದೊಡ್ಡಪತ್ರೆ ಎಲೆಗಳು ಅಥವಾ ಕಷಾಯ ಸೇವಿಸಿದರೆ ಶಮನವಾಗುತ್ತದೆ. ತಲೆನೋವಿಗೆ ಇದರ ಎಲೆಗಳ ರಸ ಹಣೆಗೆ ಲೇಪನ ಮಾಡುತ್ತಾ ಬಂದರೆ ಶೀಘ್ರ ಗುಣವಾಗುತ್ತದೆ

ಬಾಯಿ ಹುಣ್ಣು, ಹಲ್ಲು ನೋವು ಇದ್ದಾಗ ವಾದಾರು ದೊಡ್ಡಪತ್ರೆಯ ಎಲೆಗಳನ್ನು ಒಂದು ಪಾತ್ರೆಗೆ ಹಾಕಿ ಅದಕ್ಕೆ ಒಂದು ಲೋಟ ನೀರು ಚಿಟಿಕೆ ಉಪ್ಪು ಸೇರಿಸಿ ಚೆನ್ನಾಗಿ ಕುದಿಸಿ, ಉಗುರು ಬೆಚ್ಚಗಾದ ಮೇಲೆ ಮುಕ್ಕಳಿಸುತ್ತಿದ್ದರೆ ನಿವಾರಣೆಯಾಗುತ್ತದೆ.

ದೊಡ್ಡಪತ್ರೆ ಕಷಾಯ ಸೇವಿಸುವುದರಿಂದ ಅಸ್ತಮಾ ಕಾಯಿಲೆ ಸಹ ಗುಣವಾಗುವುದರೊಂದಿಗೆ ಇದರ ರಸವನ್ನು ದಿನವು ತೆಗೆದುಕೊಂಡರೆ ಸೊಂಟನೋವು ಮೋಣಕಾಲಿನ ನೋವು ಸಹ ವಾಸಿಯಾಗುತ್ತದೆ.

ಕಾಮಧೇನು

ಪ್ರಕೃತಿಯೇ ನಮ

ಎಣ್ಣೆಯೊಳಗಿನ ವಿಷದ ಜಾಲ: ಕಾನೂನು ಅಸ್ತ್ರ?

ಒಂದನೇ ಪುಟದಿಂದ.....

ಆರೋಗ್ಯಕ್ಕೆ ದೊಡ್ಡ ಕಂಟಕವಾಗಿ ಪರಿಣಮಿಸಿದ್ದು, ಈ ಜಾಲವನ್ನು ಬೇರು ಸಹಿತ ಕಿತ್ತೊಗೆಯಲು ರಾಜ್ಯ ಸರ್ಕಾರ ಇದೀಗ ಕಠಿಣ ಕಾನೂನಿನ ಅಸ್ತ್ರ ಪ್ರಯೋಗಿಸಲು ಮುಂದಾಗಿದೆ. ದೊಡ್ಡ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕೇಟರಿಂಗ್ ಸಂಸ್ಥೆಗಳು ಮತ್ತು ಬೇಕರಿಗಳಲ್ಲಿ ಒಮ್ಮೆ ಅಥವಾ ಎರಡು ಬಾರಿ ಕರಿಯಲು ಬಳಸಿ ಕಪ್ಪಾದ, ಸುಟ್ಟಎಣ್ಣೆಯನ್ನು ನಿಯಮದಂತೆ ಬಿಸಾಡಬೇಕು. ಆದರೆ, ಈ ಮಾಫಿಯಾದ ಏಜೆಂಟರು ಆ ಸುಟ್ಟ ಎಣ್ಣೆಯನ್ನು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿ ಅಕ್ರಮ ಘಟಕಗಳಿಗೆ ಸಾಗಿಸುತ್ತಾರೆ. ಅಲ್ಲಿ ಆ ಕಪ್ಪು ಎಣ್ಣೆಯ ವಾಸನೆ ಮತ್ತು ಬಣ್ಣವನ್ನು ಹೋಗಲಾಡಿಸಲು ಅಪಾಯಕಾರಿ ಬ್ಲೀಚಿಂಗ್ ಏಜೆಂಟ್‌ಗಳು, ರಾಸಾಯನಿಕಗಳು ಹಾಗೂ ಅಗ್ಗದ ಪಾಮ್‌ಆಯಿಲ್ ಮಿಶ್ರಣ ಮಾಡಲಾಗುತ್ತದೆ. ನೋಡಲು ಮತ್ತೆ ತಿಳಿಯಾಗಿ, ಹೊಸ ಎಣ್ಣೆಯಂತೆಯೇ ಕಾಣುವ ಈ ವಿಷಕಾರಿದ್ರವವನ್ನು ಕ್ಯಾನ್‌ಗಳಲ್ಲಿ ತುಂಬಿ, ಮಾರುಕಟ್ಟೆ ದರಕ್ಕಿಂತ ಅರ್ಧದಷ್ಟು ಕಡಿಮೆ ಬೆಲೆಗೆ ಬೀದಿಬದಿ ವ್ಯಾಪಾರಿಗಳು, ಸಣ್ಣ ಹೋಟೆಲ್‌ಗಳು ಮತ್ತು ತಿಂಡಿ ತಯಾರಿಕಾ ಘಟಕಗಳಿಗೆ ಸರಬರಾಜು ಮಾಡಲಾಗುತ್ತಿದೆ. ಅಡುಗೆ ಎಣ್ಣೆಯನ್ನು ಪದೇ ಪದೇ ಕಾಯಿಸಿದಾಗ ಅದರಲ್ಲಿ 'ಟೋಟಲ್ ಪೋಲಾರ್‌ಕಾಂಪೌಂಡ್ಸ್' ಎಂಬ ವಿಷಕಾರಿ ಅಂಶ ಮತ್ತು ಟ್ರಾನ್ಸ್ ಫ್ಯಾಟ್ ಪ್ರಮಾಣ ವಿಪರೀತವಾಗಿ ಹೆಚ್ಚಾಗುತ್ತದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ನಿಯಮದಂತೆ, ಎಣ್ಣೆಯಲ್ಲಿ TPC ಮಟ್ಟ ಶೇ. 25ಕ್ಕಿಂತ ಹೆಚ್ಚಾದರೆ ಅದು ಮನುಷ್ಯರ ಸೇವನೆಗೆ ಸಂಪೂರ್ಣ ಅನರ್ಹ. ಇಂತಹ ವಿಷಕಾರಿ ಎಣ್ಣೆಯಲ್ಲಿ ಕರಿದ ಆಹಾರವನ್ನು ನಿರಂತರವಾಗಿ ಸೇವಿಸುವುದರಿಂದ ಕ್ಯಾನ್ಸರ್, ಹೃದ್ರೋಗ, ಅಧಿಕ ರಕ್ತದೊತ್ತಡ, ಯಕೃತ್ತಿನ ವೈಫಲ್ಯ, ಜೀರ್ಣಕ್ರಿಯೆ ಸಮಸ್ಯೆ ಹಾಗೂ ಅಲ್ಝೈಮರ್‌ನಂತಹ ಮಾರಣಾಂತಿಕ ಕಾಯಿಲೆಗಳು ವಕ್ಕರಿಸುವ ಅಪಾಯವಿದೆ ಎಂದು ವೈದ್ಯಕೀಯ ಲೋಕ ಎಚ್ಚರಿಸಿದೆ. ಇನ್ನೊಂದೆಡೆ, ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಕಾಳಜಿಯಿಂದ ಜನರು 'ಕೋಲ್ಡ್ ಪ್ರೆಸ್ಡ್‌ಆಯಿಲ್' (Cold-Pressed Oil – ಗಾಣದಎಣ್ಣೆ) ಮೊರೆ ಹೋಗುತ್ತಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಕೆಲವು ಅಕ್ರಮ ಜಾಲಗಳು ಈ ಕ್ಷೇತ್ರದಲ್ಲೂ ನಕಲಿ ದಂಧೆ ಆರಂಭಿಸಿವೆ.

ಜನಸ್ನೇಹಿ ಪೊಲೀಸ್ ವ್ಯವಸ್ಥೆ – ಎನ್.ಶಶಿಕುಮಾರ್

ಒಂದನೇ ಪುಟದಿಂದ.....

ಕುಮಾರ್‌ರೆಡ್ಡಿ ಅವರ ಸಮ್ಮುಖದಲ್ಲಿ ಶಶಿಕುಮಾರ್ ಅವರು ಅಧಿಕಾರ ವಹಿಸಿಕೊಂಡರು. ರಾಜ್ಯ ಸರ್ಕಾರ ನವೆಂಬರ್ 18ರಂದು ಹೊರಡಿಸಿದ ಹಿರಿಯಐಪಿಎಸ್ ಅಧಿಕಾರಿಗಳ ವರ್ಗಾವಣೆ ಆದೇಶದ ಮೇರೆಗೆ, ಸ್ಥಳ ನಿರೀಕ್ಷಣೆಯಲ್ಲಿದ್ದ ಶಶಿಕುಮಾರ್ ಅವರನ್ನು ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪಶ್ಚಿಮ ವಲಯಕ್ಕೆ ನೇಮಕ ಮಾಡಲಾಗಿತ್ತು. ಕೇವಲ ಪೊಲೀಸ್ ಇಲಾಖೆ ಮಾತ್ರವಲ್ಲದೆ, ಜಿಲ್ಲಾಡಳಿತದ ಇತರೆ ಇಲಾಖೆಗಳೂ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಘಟಕದ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ಹೇಳಿದರು. ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಶಶಿಕುಮಾರ್, 2012 ಮತ್ತು 13ರಲ್ಲಿ ಸುಮಾರು ಎರಡು ವರ್ಷಗಳ ಕಾಲ ಚಿಕ್ಕಮಗಳೂರಿನಲ್ಲಿ ಎಸ್.ಪಿ ಆಗಿ ಹಾಗೂ 2021ರಿಂದ 2023 ರವರೆಗೆ ಸುಮಾರು ಎರಡೂವರೆ ವರ್ಷಗಳ ಕಾಲ ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿ (ಜೊತೆಗೆ ಹುಬ್ಬಳ್ಳಿ–ಧಾರವಾಡ ಆಯುಕ್ತರಾಗಿಯೂ) ಕರ್ತವ್ಯ ನಿರ್ವಹಿಸಿರುವುದಾಗಿ ಸ್ಮರಿಸಿದರು. ಈ ಹಿನ್ನೆಲೆಯಲ್ಲಿ, ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ವಲಯದಎಲ್ಲಾಘಟಕದ ಅಧಿಕಾರಿಗಳಾದ ಎಸ್.ಪಿ ಹಾಗೂ ಹೆಚ್ಚುವರಿ ಎಸ್.ಪಿಗಳಿಂದ ಆಯಾ ಜಿಲ್ಲೆಗಳ ಕಾನೂನು ಸುವ್ಯವಸ್ಥೆ ಸಮಸ್ಯೆಗಳು, ಅಪರಾಧ ಪ್ರಕರಣಗಳ ಸ್ಥಿತಿಗತಿ ಹಾಗೂ ಸೂಕ್ಷ್ಮ ವಿಷಯಗಳ ಕುರಿತು ಸಂಕ್ಷಿಪ್ತ ಮಾಹಿತಿ ಪಡೆದುಕೊಂಡಿರುವುದಾಗಿ ತಿಳಿಸಿದರು.

ದಲಿತರ ಸ್ಥಿತಿಗೆ ಖರ್ಗೆ ಕುಟುಂಬವೇ ಹೊಣೆ: ಎಚ್ಡಿಕೆ

ಒಂದನೇ ಪುಟದಿಂದ.....

ಚರ್ಚೆಗೆ ಗ್ರಾಸವಾಗಿದ್ದಾಗ, ಪ್ರಿಯಾಂಕ್ ಖರ್ಗೆ ಅವರು ದಲಿತರಿಗೆ ಪ್ರತಿನಿತ್ಯದೇವಸ್ಥಾನ ಪ್ರವೇಶ ನಿರಾಕರಿಸಲಾಗುತ್ತಿದೆ ಎಂದು ಮರುಪ್ರಶ್ನೆ ಹಾಕಿದ್ದರು. ಇದಕ್ಕೆ ತಿರುಗೇಟು ನೀಡಿರುವ ಕುಮಾರಸ್ವಾಮಿ, ಗೃಹ ಸಚಿವರುತಮ್ಮ ಆಡಳಿತದ ಹುಳುಕುಗಳನ್ನು ಹಾಗೂ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸಂಬಂಧವಿಲ್ಲದ ವಿಚಾರವನ್ನು ಎಳೆದು ತಂದು ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮೇಕೆದಾಟು ಯೋಜನೆ ವಿಚಾರವಾಗಿ ತಮ್ಮನ್ನು ಟೀಕಿಸುತ್ತಿರುವ ಕಾಂಗ್ರೆಸ್ ನಾಯಕರಿಗೂ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಮೇಕೆದಾಟು ಯೋಜನೆಯ ವಿಚಾರವನ್ನು ಎಲ್ಲಿ ಮತ್ತು ಯಾವಾಗ ಪ್ರಸ್ತಾಪ ಮಾಡಬೇಕು ಎಂಬುದು ತಮಗೆ ಚೆನ್ನಾಗಿ ಗೊತ್ತಿದ್ದು, ಅದನ್ನು ಕಾಂಗ್ರೆಸ್ ನಾಯಕರಿಂದ ಕಲಿಯ ಬೇಕಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಮಡಿಕೇರಿ : 2025–26ನೇ ಸಾಲಿಗೆ ಕೇಂದ್ರ ಸರ್ಕಾರದ ಎಂಎಸ್‌ಎಂಇ. ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಯೋಗದೊಂದಿಗೆ ಒಂದು ಬಾರಿಯ ಬಡ್ಡಿ ಸಹಾಯಧನವನ್ನು ನೇರವಾಗಿ ಸಾಲದ ಖಾತೆಗೆ ಜಮೆ ಮಾಡಲು ಅರ್ಹ ಘಟಕಗಳಿಂದ ಪ್ರಸ್ತಾವನೆ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಂಟಿ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಹಿನೂರ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ – 571 201 ಇಲ್ಲಿಗೆ ಖುದ್ದಾಗಿ ಅಥವಾ ದೂರವಾಣಿ ಮುಖೇನ (ದೂರವಾಣಿ ಸಂಖ್ಯೆ: 08272–228746, 7975556779, 8553226664, 9845596252) ಸಂಪರ್ಕಿಸುವುದು.

ಕೃಷಿ ಸಿಬ್ಬಂದಿ ನೇಮಕಾತಿಗೆ ಅರ್ಜಿ ಆಹ್ವಾನ

ಮಡಿಕೇರಿ : ಕೊಡಗು ಜಿಲ್ಲೆ ಕೃಷಿ ಇಲಾಖೆಯ ಕೃಷೋನ್ನತಿ ಕೃಷಿ ವಿಸ್ತರಣೆ ಉಪ ಅಭಿಯಾನ (ಆತ್ಮ) ಯೋಜನೆಯಡಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು 01 ಹುದ್ದೆಯನ್ನು ಒಪ್ಪಂದದ ಆಧಾರದ ಮೇಲೆ 2026–27ನೇ ಸಾಲಿನ ಸೀಮಿತ ಅವಧಿಗೆ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಆತ್ಮ ವಿಭಾಗ, ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ನರ್ಸಿಂಗ್ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮಂಗಳೂರು – 2026–27ನೇ ಸಾಲಿನಲ್ಲಿ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಮತ್ತು ಪಾರ್ಸಿ) ಸಮುದಾಯದ ಬಿ.ಎಸ್ಸಿ ನರ್ಸಿಂಗ್ ಮತ್ತು ಜಿ.ಎನ್.ಎಂ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮಂಗಳೂರು (0824–2433078), ಬಂಟ್ವಾಳ(08255–232470), ಬೆಳ್ತಂಗಡಿ (08256–295335), ಪುತ್ತೂರು (08251–237078), ಸುಳ್ಯ (08257230666) ಹಾಗೂ ಇಲಾಖೆಯ ವೆಬ್‌ಸೈಟ್ https://dom.karnataka.gov.in ಅಥವಾ ಸಹಾಯವಾಣಿ ಸಂಖ್ಯೆ 8277799990ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕಂ ಕ್ರಷ್ ಸಹಾಯಕಿ ಹುದ್ದೆ : ಅರ್ಜಿ ಆಹ್ವಾನ

ಮಂಗಳೂರು – ಬೆಳ್ತಂಗಡಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಉದಯನಗರ ಅಂಗನವಾಡಿ ಕಂ ಕ್ರಷ್, ಬೆಳ್ತಂಗಡಿ ನಗರ ಹಾಗೂ ಎಸ್.ಡಿ.ಎಂ. ಅಂಗನವಾಡಿ ಕಂ ಕ್ರಷ್ ಉಜಿರೆ ಗ್ರಾಮ, ಅಂಗನವಾಡಿ ಕಂ ಕ್ರಷ್ ಕೇಂದ್ರಕ್ಕೆ ತಲಾ ಒಬ್ಬರಂತೆ 2 ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಬೆಳ್ತಂಗಡಿ ನಿರೀಕ್ಷಣಾ ಮಂದಿರ ಹಿಂಭಾಗದಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಂಪರ್ಕಿಸಬಹುದು.

ಕೃಷಿ ಉದ್ಯಮಶೀಲತಾ ತರಬೇತಿಗಾಗಿ ಅರ್ಜಿ ಆಹ್ವಾನ

ಶಿವಮೊಗ್ಗ : ಗ್ರಾಮೀಣ ಪ್ರದೇಶದ ರೈತರು / ರೈತ ಮಹಿಳೆಯರು /ನಿರುದ್ಯೋಗ ಯುವಕ ಯುವತಿಯರಿಗೆ, ಪಶು ವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಇವರ ವತಿಯಿಂದ ದಿನಾಂಕ: 23.11.2026ರಂದು "ವೈಜ್ಞಾನಿಕ ಹಂದಿ ಸಾಕಾಣಿಕೆ ಕುರಿತು ಕೃಷಿ ಉದ್ಯಮಶೀಲತಾ" ಕುರಿತಾಗಿ 1 ದಿನದ ಉಚಿತ ತರಬೇತಿ ಕಾರ್ಯಕ್ರಮವನ್ನು, ಜಾನುವಾರು ಸಾಕಾಣಿಕ ಸಂಕೀರ್ಣ, ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 9448224595, 9916208462, 9113938922 ಸಂಪರ್ಕಿಸಬಹುದು.

ವಿಕಲಚೇತನರಿಂದ ಅರ್ಜಿ ಆಹ್ವಾನ

ಶಿವಮೊಗ್ಗ : ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 2026–27ನೇ ಸಾಲಿಗೆ 14 ಫಲಾನುಭವಿ ಆಧಾರಿತ ಯೋಜನೆಗಳನ್ನು ಸುವಿಧಾ ಯೋಜನೆಯಡಿ ವಿಕಲಚೇತನರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ 08182–251676, 9980150110, 7899137243, 9741161346, 9535247757, 9110493122, 9480767638, 9731922693 ಸಂಪರ್ಕಿಸುವುದು.

ಅಪಘಾತ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಕ್ಕೆ ಎಸ್. ಪಿ. ಸೂಚನೆ



ಮಂಗಳೂರು : ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ, ಲೋಕೋಪಯೋಗಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಪದೇ ಪದೇ ಅಪಘಾತಗಳು ಸಂಭವಿಸಿ ಜೀವಹಾನಿಯಾಗುತ್ತಿರುವ ಸ್ಥಳಗಳನ್ನು ಗುರುತಿಸಿ, ಅಲ್ಲಿ ತಾತ್ಕಾಲಿಕ ಹಾಗೂ ಶಾಶ್ವತ ಸುರಕ್ಷತಾ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಪಘಾತ ವಲಯಗಳಲ್ಲಿ ವೇಗ ನಿಯಂತ್ರಣ, ಟ್ರಾಫಿಕ್ ಸಿಗ್ನಲ್ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವಂತೆ ತಿಳಿಸಿದರು. ರಾತ್ರಿ ವೇಳೆ ಬೀದಿದೀಪಗಳಿಲ್ಲದೆ ಅಪಘಾತಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಹೆದ್ದಾರಿಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲು ಮಹಾನಗರಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲೆಯಲ್ಲಿ ಒಟ್ಟು 42 ಪ್ರಮುಖ ಅಪಘಾತ ವಲಯಗಳನ್ನು ಗುರುತಿಸಲಾಗಿದ್ದು ಅಲ್ಲಿ ಸುರಕ್ಷತಾ ಕ್ರಮಕೈಗೊಳ್ಳಲಾಗಿದೆ ಎಂದು ಹೆದ್ದಾರಿ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. 2025–26ನೇ ಸಾಲಿನಲ್ಲಿ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಪೊಲೀಸ್ ಮತ್ತು ಆರ್.ಟಿ.ಒ ಇಲಾಖೆಗಳು ತೀವ್ರ ಕಾರ್ಯಾಚರಣೆ ನಡೆಸಿವೆ. ಟಿಂಟೆಡ್ ಗ್ಲಾಸ್ ಅಳವಡಿಸಿದ್ದ 33,703 ವಾಹನಗಳ ಮೇಲೆ ಪ್ರಕರಣ ದಾಖಲಿಸಿ, 2025ರಲ್ಲಿ 73.89 ಲಕ್ಷ ಹಾಗೂ 2026ರಲ್ಲಿ 75.88 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಮಂಗಳೂರಿನಲ್ಲಿ ನ. 30ರಂದು ಬೃಹತ್ ಉದ್ಯೋಗ ಮೇಳ



ಮಂಗಳೂರು: ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕರಾವಳಿ ಭಾಗದ ವಿಭಾಗೀಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ನವೆಂಬರ್ 30 ರಂದು ಬೆಳಿಗ್ಗೆ 9ರಿಂದ ಮಂಗಳೂರು ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಈ ಮೇಳದಲ್ಲಿ ಸುಮಾರು 200ಕ್ಕೂ ಹೆಚ್ಚು ಉದ್ಯೋಗದಾತರು ಮತ್ತು 10,000ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ. ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಿಂದಲೂ ಉದ್ಯೋಗಾಕಾಂಕ್ಷಿಗಳು ಈ ಬೃಹತ್ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟ 10,089 ಅಭ್ಯರ್ಥಿಗಳು, ಜಿಲ್ಲೆಯ ಯುವನಿಧಿ ಯೋಜನೆಯಡಿ ನೋಂದಾಯಿಸಿದ 8,708 ಫಲಾನುಭವಿಗಳು, ಯುವ ಉದ್ಯೋಗ ಸೇತು ಪೋರ್ಟಲ್‌ನಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಲ್ಪಟ್ಟ ಉದ್ಯೋಗಾ ಕಾಂಕ್ಷಿಗಳು ಹಾಗೂ ಜಿಲ್ಲೆಯ ಇತರ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಪಡೆಯಲು ಇದು ಸುವರ್ಣಾವಕಾಶವಾಗಿದೆ ಎಂದು ಅವರು ಹೇಳಿದ್ದಾರೆ.

'ಜೋರ್ಜೀಸ್ ಸ್ಮಾರ್ಟ್ ಕ್ಲಾಸ್ ರೂಮ್' ಉದ್ಘಾಟನೆ



ಮಂಗಳೂರು : ಮಂಗಳೂರಿನ ಶಕ್ತಿನಗರದಲ್ಲಿರುವ ವಿಶ್ವ ಕೊಂಕಣಿ ಕೇಂದ್ರದಲ್ಲಿ ನವೆಂಬರ್ 21ರ ಶನಿವಾರದಂದು 'ಜೋರ್ಜೀಸ್ ಸ್ಮಾರ್ಟ್ ಕ್ಲಾಸ್ ರೂಮ್' ಉದ್ಘಾಟನಾ ಸಮಾರಂಭ ನಡೆಯಲಿದೆ. ಅಮೇರಿಕಾ ನಿವಾಸಿ ವಿಜ್ಞಾನಿ ಹಾಗೂ ಚಿಂತಕ ಪ್ರೊ. ಡಾ. ಕೃಷ್ಣ ಶೆಣೈ ಇದರ ಪ್ರವರ್ತಕರು ಮತ್ತು ಬೋಧಕರಾಗಿದ್ದಾರೆ. ಭಾರತೀಯ ಸಿದ್ಧಾಂತ ಮತ್ತು ಮೌಲ್ಯಗಳನ್ನು ಇಂದಿನ ಸನ್ನಿವೇಶಕ್ಕೆ ತಕ್ಕಂತೆ ಸಮೀಕರಿಸಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಬೋಧಿಸುವುದು ಹಾಗೂ ಹೊಸ ವಿಜ್ಞಾನಾವಿಷ್ಕಾರಗಳನ್ನು ಪರಿಚಯಿಸುವುದು ಈ ತರಗತಿಯ ಮುಖ್ಯ ಉದ್ದೇಶವಾಗಿದೆ. ಅಮೇರಿಕಾದ ಕೊಂಕಣಿ ಚಾರಿಟೇಬಲ್ ಫಂಡ್ ಹಾಗೂ ಪೊಸಾರ್ ಹರಿ ಶೆಣೈ ಚಾರಿಟೇಬಲ್ ಫಂಡ್ ಸಹಯೋಗದಲ್ಲಿ ಈ ಕಾರ್ಯಕ್ರಮ ಜರುಗಲಿದೆ. ಮೂಲ್ಕಿಯ ಶ್ರೀ ವ್ಯಾಸಮಹರ್ಷಿ ವಿದ್ಯಾಪೀಠದ 22 ವಿದ್ಯಾರ್ಥಿಗಳು ಈ ಪ್ರಾಯೋಗಿಕ ತರಗತಿಗೆ ಆಯ್ಕೆಯಾಗಿದ್ದು, ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಡಾ. ಕೃಷ್ಣ ಶೆಣೈ ಪಾಠ ಮಾಡಲಿದ್ದಾರೆ. ನವೆಂಬರ್ 29ರಂದು ಸಂಜೆ 3 ಗಂಟೆಗೆ ಸಮಾರೋಪ ಸಮಾರಂಭ ನಡೆದು, ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು ಎಂದು ಕಾರ್ಯಕ್ರಮ ಸಂಯೋಜಕ ಎಂ.ಆರ್. ಕಾಮತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರು ಉದ್ಯಮಿಗಳನ್ನು ಪ್ರೋತ್ಸಾಹಿಸಿ – ಶಾಸಕ ವೇದವ್ಯಾಸ ಕಾಮತ್



ಮಂಗಳೂರು: ವೋಕಲ್ ಫಾರ್ ಲೋಕಲ್ ತತ್ವದಡಿ, ಕಿರು ಉದ್ಯಮಿಗಳ ಗುಡಿ ಕೈಗಾರಿಕೆ, ಗೃಹ ಉತ

ಸುದ್ದಿ ತುಣುಕು

ಪ್ರತಿ ಟನ್ ಕಬ್ಬಿಗೆ 3,600 ರೂಪಾಯಿ ನಿಗದಿಗೊಳಿಸುವಂತೆ ಆಗ್ರಹಿಸಿ ಜಿಲ್ಲೆಯ ಕಬ್ಬು ಬೆಳೆಗಾರರು ರಾಷ್ಟ್ರೀಯ ಹೆದ್ದಾರಿ 48ರಲ್ಲಿ ವಾಹನ ಸಂಚಾರ ತಡೆದು ನಡೆಸುತ್ತಿದ್ದ ಪ್ರತಿಭಟನೆಯನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಕರ್ಣಾಟಕ ಬ್ಯಾಂಕ್‌ನ ನೂತನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಅನುಭವಿ ಬ್ಯಾಂಕರ್ ಉದಯ ಕುಮಾರ್ ಹೆಬ್ಬಾರ್ ನೇಮಕಗೊಂಡಿದ್ದಾರೆ.

ರಾಜ್ಯದಲ್ಲಿರುವ ಹೆಬ್ಬಕ್ಕಿಗಳ ಪ್ರಸ್ತುತ ಸಂಖ್ಯೆಯ ವಿವರಗಳನ್ನು ಸಲ್ಲಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹೈಕೋರ್ಟ್ ಸೂಚಿಸಿದೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ನೀರಾವರಿ, ಕೈಗಾರಿಕೆ, ಮೂಲಭೂತ ಸೌಕರ್ಯಗಳು ಸೇರಿದಂತೆ ಇಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕೆಂದು ಜನರು ಆಗ್ರಹಿಸಿದ್ದಾರೆ.

ಕರ್ನಾಟಕ ಒನ್, ಬೆಂಗಳೂರು ಒನ್‌ಗೆ ಪ್ರಜಾ ಸೇವಾ ಕೇಂದ್ರ ಎಂದು ಮರು ನಾಮಕರಣ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಏರ್‌ಪೋರ್ಟ್ ಕಡೆಗೆ ಹೋಗುವವರು ಹಾಗೂ ಉತ್ತರ ಬೆಂಗಳೂರಿನಿಂದ ನಗರದೊಳಗೆ ಬರುವವರು ಪ್ರತಿನಿತ್ಯ ಸಂಚಾರ ದಟ್ಟಣೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ಹೊಸ ಫ್ಲೈಓವರ್ ನಿರ್ಮಿಸುವ ಅಗತ್ಯವಿದೆ ಎಂದು ಸಿಎಂ ಡಿಕೆಶಿ ಹೇಳಿದ್ದಾರೆ.

ತುಂಗಾಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ನ.28ರ ವರೆಗೆ ನೀರು ಬಿಡಲು ತುಂಗಭದ್ರಾ ನೀರಾವರಿ ಸಲಹಾ ಸಮಿತಿ ನಿರ್ಧರಿಸಿದೆ.

ಸಿವಿಲ್ ಪ್ರಕರಣಗಳಲ್ಲಿ ಪೊಲೀಸರು ಹಸ್ತಕ್ಷೇಪ ಮಾಡಬಾರದು ಎಂದು ಹೈಕೋರ್ಟ್ ಹಲವು ಆದೇಶಗಳನ್ನು ನೀಡಿದ್ದರೂ ಸಿವಿಲ್ ಪ್ರಕರಣಗಳಲ್ಲಿ ಮಧ್ಯಪ್ರವೇಶಿಸುವುದನ್ನು ಮಾತ್ರ ಪೊಲೀಸರು ನಿಲ್ಲಿಸಿಲ್ಲ ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

ನನ್ನ ಅನುಭವದ ಆಧಾರದ ಮೇಲೆ ಪೊಲೀಸ್ ಇಲಾಖೆಯಲ್ಲಿ ಹೊಸ ಬದಲಾವಣೆಗಳನ್ನು ತರುವ ಪ್ರಯತ್ನ ಮಾಡುತ್ತೇನೆ ಎಂದು ನೂತನ ಪೊಲೀಸ್ ಮುಖ್ಯ ಆಯುಕ್ತ ಆರ್.ಹಿತೇಂದ್ರ ಹೇಳಿದರು.

ಅಪಾಯಕಾರಿ ವಸ್ತುಗಳು ಆನ್‌ಲೈನ್‌ನಲ್ಲಿ ಯಾವುದೇ ನಿಯಂತ್ರಣವಿಲ್ಲದೆ ಲಭ್ಯವಿರುವುದನ್ನು ತಡೆಯುವ ಮೂಲಕ ಗ್ರಾಹಕರನ್ನು ಮತ್ತು ಸಾರ್ವಜನಿಕರನ್ನು ರಕ್ಷಿಸಲು ಕೇಂದ್ರ ಗ್ರಾಹಕ ಇಲಾಖೆ ಸದಾ ಬದ್ಧವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮುಸ್ಲಿಂ ಮತದಾರರ ಹೆಸರು ಅಳಿಸಲು ಯತ್ನಿಸಿದ ಆರೋಪ ಸಂಬಂಧ 10 ಮಂದಿ ಬೂತ್ ಮಟ್ಟದ ಏಜೆಂಟ್‌ಗಳ ವಿರುದ್ಧ ದಾಖಲಾಗಿರುವ ಮೂರು ಪ್ರತ್ಯೇಕ ಎಫ್ ಐಆರ್‌ಗಳ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

ಅವರೆಕಾಳು ಉಪ್ಪಿಟ್ಟು



ಬೇಕಾಗುವ ಪದಾರ್ಥಗಳು :
ಉಪ್ಪಿಟ್ಟು ರವೆ – 1/2 ಕಪ್
ನೀರು – 1/2
ಅವರೇಕಾಳು – 1/2 ಕಪ್
ಸಾಸಿವೆ – 1/2 ಚಮಚ
ಉದ್ದಿನಬೇಳೆ – 1 ಚಮಚ
ಕಡ್ಲೆಬೇಳೆ – 1 ಚಮಚ
ಈರುಳ್ಳಿ – 1
ಟೊಮ್ಯಾಟೋ – 1
ಹಸಿಮೆಣಸಿನಕಾಯಿ – 3
ಕರಿ ಬೇವಿನ ಎಲೆ – 4–5
ಸಣ್ಣಗೆ ಹೆಚ್ಚಿದ ಶುಂಠಿ – 1 ಚಮಚ
ಅರಶಿನ ಪುಡಿ – ಸ್ವಲ್ಪ
ಅಡುಗೆ ಎಣ್ಣೆ – 8 ಚಮಚ
ಉಪ್ಪು – ರುಚಿಗೆ ತಕ್ಕಷ್ಟು
ಕೊತ್ತಂಬರಿ ಸೊಪ್ಪು – ಸ್ವಲ್ಪ
ತೆಂಗಿನತುರಿ – 1/2 ಕಪ್

ಮಾಡುವ ವಿಧಾನ :
ಮೊದಲಿಗೆ ಅವರೆಕಾಳನ್ನು ಸುಲಿದು, ಸ್ವಲ್ಪ ಉಪ್ಪು ಸೇರಿಸಿ ಬೇಯಿಸಿಟ್ಟುಕೊಳ್ಳಬೇಕು, ನಂತರ ರವೆಯನ್ನು ಸ್ವಲ್ಪ ಎಣ್ಣೆಯೊಂದಿಗೆ ಹುರಿದಿಟ್ಟುಕೊಂಡು, ಅದೇ ಬಾಣಲೆಗೆ ಎಣ್ಣೆ, ಸಾಸಿವೆ, ಉದ್ದಿನಬೇಳೆ ಮತ್ತು ಕಡ್ಲೆಬೇಳೆ ಹಾಕಿ. ಸಾಸಿವೆ ಸಿಡಿದ ಕೂಡಲೇ ಕರಿಬೇವು, ಕತ್ತರಿಸಿದ ಶುಂಠಿ, ಕತ್ತರಿಸಿದ ಈರುಳ್ಳಿ ಮತ್ತು ಹಸಿರು ಮೆಣಸಿನಕಾಯಿ ಸೇರಿಸಿ. ಮಧ್ಯಮ ಉರಿಯಲ್ಲಿ ಹುರಿಯಬೇಕು. ಆಮೇಲೆ ಟೊಮ್ಯಾಟೋ ಹಾಕಿ. ಉಪ್ಪು ಮತ್ತು ಅರಶಿನ ಪುಡಿ ಸೇರಿಸಿ. ಟೊಮ್ಯಾಟೋ ಮೆತ್ತಗಾಗುವವರೆಗೆ ಹುರಿದು ಅದಕ್ಕೆ ಬೇಯಿಸಿದ ಅವರೆಕಾಳನ್ನು ಸೇರಿಸಿ. ನೀರು ಹಾಕಿ, ನೀರು ಕುದಿಯಲು ಪ್ರಾರಂಭವಾದ ಕೂಡಲೇ ಹುರಿದಿಟ್ಟ ರವೆಯನ್ನು ನಿಧಾನವಾಗಿ ಹಾಕುತ್ತಾ ಮಗುಚಿ. ಸ್ವಲ್ಪ ಗಟ್ಟಿಯಾದ ಮೇಲೆ ಮುಚ್ಚಳ ಮುಚ್ಚಿ ಸಣ್ಣ ಉರಿಯಲ್ಲಿ ಒಂದೆರಡು ನಿಮಿಷ ಬೇಯಿಸಬೇಕು. ನಂತರ ತೆಂಗಿನತುರಿ, ಕೊತ್ತಂಬರಿ ಸೊಪ್ಪು ಸೇರಿಸಿ ಮತ್ತೊಮ್ಮೆ ಚೆನ್ನಾಗಿ ಮಗುಚಿದರೆ ರುಚಿಯಾದ ಅವರೆಕಾಳು ಉಪ್ಪಿಟ್ಟು ಸವಿಯಲು ಸಿದ್ಧ.

ಟರ್ಕಿ ನಡೆಗೆ ಭಾರತ ತೀವ್ರ ಆಕ್ಷೇಪ



ಅಮೇರಿಕ : ವಿಶ್ವಸಂಸ್ಥೆ ಮತ್ತು ಇಸ್ಲಾಮಿಕ್ ಸಹಕಾರ ಸಂಘಟನೆಯ (OIC) ನಡುವಿನ ಸಹಕಾರಕ್ಕೆ ಸಂಬಂಧಿಸಿದ ನಿರ್ಣಯದ ಸಮಾಲೋಚನೆಗಳಿಂದ ಭಾರತ ಹಾಗೂ ಇತರ ಸದಸ್ಯ ರಾಷ್ಟ್ರಗಳನ್ನು ಉದ್ದೇಶಪೂರ್ವಕವಾಗಿ ಹೊರಗಿಟ್ಟ ಟರ್ಕಿಯ ನಿರ್ಧಾರಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಅಲ್ಲದೆ, ಸಾಮಾನ್ಯ ಸಭೆಯಲ್ಲಿ ಇರಾಕ್ ಮಂಡಿಸಿದ ಈ ಕರಡು ನಿರ್ಣಯದ ವಿರುದ್ಧ ಭಾರತ ಮತ ಚಲಾಯಿಸಿದೆ. ಮತದಾನದ ಮೂಲಕ ಅಂಗೀಕಾರಗೊಂಡ ಈ ನಿರ್ಣಯದ ಪರವಾಗಿ 112 ರಾಷ್ಟ್ರಗಳು ಮತ ಚಲಾಯಿಸಿದರೆ, 39 ರಾಷ್ಟ್ರಗಳು ಮತದಾನದಿಂದ ದೂರ ಉಳಿದವು.

ಚೀನಾ, ಅಮೆರಿಕ ಮತ್ತು ರಷ್ಯಾ ಅಧ್ಯಕ್ಷರ ಸಭೆ!



ಬೀಜಿಂಗ್: ಚೀನಾ, ಅಮೆರಿಕ ಮತ್ತು ರಷ್ಯಾ ಅಧ್ಯಕ್ಷರ ನಡುವೆ ಮೊಟ್ಟಮೊದಲ ಬಾರಿಗೆ ಐತಿಹಾಸಿಕ ತ್ರಿಪಕ್ಷೀಯ ಸಭೆ ಇದೇ ನವೆಂಬರ್ 19 ರಂದು ನಡೆಯಲಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯ ಖಚಿತಪಡಿಸಿದೆ. ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ (ಅಪೆಕ್) ಶೃಂಗಸಭೆಯ ಸಂದರ್ಭದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಶೆನ್‌ಜೆನ್‌ನಲ್ಲಿ ಬರಮಾಡಿಕೊಳ್ಳಲಿದ್ದಾರೆ. ಒಂದೇ ವೇದಿಕೆಯಲ್ಲಿ ತ್ರಿಪಕ್ಷೀಯ ಶೃಂಗಸಭೆ ನಡೆಸುತ್ತಿರುವುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ಐಪಿಎಲ್ ಸಂಸ್ಥಾಪಕ ಲಲಿತ್ ಮೋದಿಗೆ ಬ್ರಿಟಿಷ್ ಪೌರತ್ವ



ಲಂಡನ್: ಕಳೆದ ಹಲವು ವರ್ಷಗಳಿಂದ ಲಂಡನ್‌ನಲ್ಲಿ ನೆಲೆಸಿರುವ ಇಂಡಿಯನ್ ಪ್ರೀಮಿಯರ್ ಲೀಗ್ (IPL) ಸಂಸ್ಥಾಪಕ ಲಲಿತ್ ಮೋದಿ ಅವರು ಬ್ರಿಟಿಷ್ ಪೌರತ್ವವನ್ನು ಪಡೆದುಕೊಂಡಿದ್ದಾರೆ. ಯುನೈಟೆಡ್ ಕಿಂಗ್‌ಡಮ್ ಅನೇಕ ವರ್ಷಗಳಿಂದ ತಮ್ಮ ಮನೆಯಾಗಿದೆ ಎಂದು ಹೇಳಿಕೊಂಡಿರುವ ಅವರು, ಇತ್ತೀಚೆಗೆ ತಮಗೆ ಅಲ್ಲಿನ ಪೌರತ್ವ ಲಭಿಸಿರುವುದಾಗಿ ಸಾಮಾಜಿಕ ಜಾಲತಾಣ 'ಎಕ್ಸ್' ಮೂಲಕ ಅಧಿಕೃತವಾಗಿ ಘೋಷಿಸಿದ್ದಾರೆ. ಕುಟುಂಬ ಮತ್ತು ಸ್ನೇಹಿತರ ಸಮ್ಮುಖದಲ್ಲಿ ನಡೆದ ಪೌರತ್ವ ಸ್ವೀಕಾರ ಸಮಾರಂಭದ ಫೋಟೋಗಳನ್ನು ಹಂಚಿಕೊಂಡಿದ್ದಾರೆ.

ಇರಾನ್ ಡ್ರೋನ್ ದಾಳಿ; ಸರಣಿ ಸ್ಫೋಟ



ಬಹರೈನ್ : ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ತೀವ್ರಗೊಂಡಿದ್ದು, ಗಲ್ಫ್ ರಾಷ್ಟ್ರವಾದ ಬಹ್ರೇನ್‌ನಲ್ಲಿರುವ ಅಮೆರಿಕದ ಸೇನಾ ನೆಲೆಯ ಮೇಲೆ ದಾಳಿ ನಡೆಸಿರುವುದಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ಘೋಷಿಸಿದೆ. ದಾಳಿಯ ಬೆನ್ನಲ್ಲೇ ಬಹ್ರೇನ್‌ನಲ್ಲಿ ಸರಣಿ ಸ್ಫೋಟಗಳು ಸಂಭವಿಸಿದ್ದು, ಎಚ್ಚರಿಕೆಯ ಸೈರನ್‌ಗಳು ಮೊಳಗಿವೆ. ಭಾನುವಾರ ಸ್ಥಳೀಯ ಕಾಲಮಾನ ಬೆಳಿಗ್ಗೆ 4:00 ಗಂಟೆಗೆ ಮೊದಲ ಸ್ಫೋಟದ ಸದ್ದು ಕೇಳಿಬಂದಿದ್ದು, ಬಳಿಕ ಬೆಳಿಗ್ಗೆ 6:30ರ ಸುಮಾರಿಗೆ ಎರಡನೇ ಸರಣಿ ಸ್ಫೋಟಗಳು ಸಂಭವಿಸಿವೆ ಎಂದು ವರದಿಯಾಗಿದೆ.

ಉಕ್ರೇನ್‌ನಿಂದ 1,200 ಡ್ರೋನ್‌ಗಳ ಭೀಕರ ದಾಳಿ



ರಷ್ಯ : ಕಳೆದ ಐದು ವರ್ಷಗಳ ಯುದ್ಧದ ಇತಿಹಾಸದಲ್ಲೇ ಅತ್ಯಂತ ದೊಡ್ಡ ವೈಮಾನಿಕ ದಾಳಿ ನಡೆಸಿರುವ ಉಕ್ರೇನ್, ರಾತ್ರಿ ಪೂರ್ತಿ ರಷ್ಯಾದ ನೆಲೆಗಳನ್ನು ಗುರಿಯಾಗಿಸಿಕೊಂಡು 1,200 ಡ್ರೋನ್‌ಗಳನ್ನು ಹಾರಿಸಿದೆ. ದಾಳಿಯಲ್ಲಿ 1,198 ಉಕ್ರೇನಿಯನ್ ದೀರ್ಘ ಶ್ರೇಣಿಯ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾದ ರಕ್ಷಣಾ ಸಚಿವಾಲಯ ಹೇಳಿಕೊಂಡಿದೆ. ಆದಾಗ್ಯೂ, ರಷ್ಯಾದ ಮೂರು ಪ್ರದೇಶಗಳಲ್ಲಿ ಸಂಭವಿಸಿದ ದಾಳಿಯಲ್ಲಿ 12 ವರ್ಷದ ಬಾಲಕ ಸೇರಿದಂತೆ ಏಳು ಜನರು ಮೃತಪಟ್ಟಿದ್ದು, 17 ಮಂದಿ ಗಾಯಗೊಂಡಿದ್ದಾರೆ. 17 ವರ್ಷದ ಯುವಕ ಸೇರಿದಂತೆ ಕನಿಷ್ಠ ಇಬ್ಬರು ಬಲಿಯಾಗಿದ್ದಾರೆ.

ಕಿವೀಸ್ ವಿರುದ್ಧ ಭಾರತಕ್ಕೆ ರೋಚಕ ಜಯ



ಹೈದರಾಬಾದ್ : ಬೌಲರ್‌ಗಳ ಸಂಘಟಿತ ಹಾಗೂ ಕರಾರುವಾಕ್ ದಾಳಿಯ ನೆರವಿನಿಂದ ಟೀಂ ಇಂಡಿಯಾ ಆತಿಥೇಯ ನ್ಯೂಜಿಲೆಂಡ್ ವಿರುದ್ಧದ ಐದನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ 22 ರನ್‌ಗಳ ರೋಚಕ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಶ್ರೇಯಸ್ ಅಯ್ಯರ್ ನಾಯಕತ್ವದ ಭಾರತ ತಂಡವು ಐದು ಪಂದ್ಯಗಳ ಏಕದಿನ ಸರಣಿಯನ್ನು 3–1 ಅಂತರದಿಂದ ವಶಪಡಿಸಿಕೊಂಡಿದೆ. ಭಾರತೀಯ ಬೌಲರ್‌ಗಳು 48.1 ಓವರ್‌ಗಳಲ್ಲಿ 187 ರನ್‌ಗಳಿಗೆ ಕಟ್ಟಿಹಾಕುವ ಮೂಲಕ ಸ್ಮರಣೀಯ ಗೆಲುವು ತಂದುಕೊಟ್ಟರು.

ಭಾರತ ಅಂಡರ್–19 ಏಷ್ಯಾ ಕಪ್ ಚಾಂಪಿಯನ್



ಓಮಾನ್ : ಅಂಡರ್–19 ಏಷ್ಯಾ ಕಪ್ 2026ರ ರೋಚಕ ಫೈನಲ್ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು 1 ವಿಕೆಟ್‌ನಿಂದ ಮಣಿಸಿದ ಭಾರತ ಕಿರಿಯರ ತಂಡ ಐತಿಹಾಸಿಕ 9ನೇ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಪಾಕಿಸ್ತಾನ ನೀಡಿದ್ದ 338 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಭಾರತಕ್ಕೆ ಕೊನೆಯ ಎಸೆತದಲ್ಲಿ ಗೆಲ್ಲಲು 3 ರನ್‌ಗಳ ಅಗತ್ಯವಿದ್ದಾಗ, ಡೀಪ್ ಎಕ್ಸ್‌ಟ್ರಾ ಕವರ್ ಮೂಲಕ ಭರ್ಜರಿ ಬೌಂಡರಿ ಬಾರಿಸಿದ ಮೋಹಿತ್ ಉಲ್ವಾ ಇಡೀ ದೇಶವೇ ಸಂಭ್ರಮಿಸುವಂತೆ ಮಾಡಿದರು.

ಕಿರಿಯ ನಾಯಕನಾದ 15ರ ಹರೆಯದ ವೈಭವ್



ಹೈದರಾಬಾದ್ : ಭಾರತದ ಯುವ ಕ್ರಿಕೆಟ್ ಪ್ರತಿಭೆ ವೈಭವ್ ಸೂರ್ಯವಂಶಿ ಪುರುಷರ ಟಿ20 ಕ್ರಿಕೆಟ್ ಇತಿಹಾಸದಲ್ಲಿ ವಿಶ್ವದ ಅತ್ಯಂತ ಕಿರಿಯ ನಾಯಕ ಎಂಬ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ಸೌರಾಷ್ಟ್ರ ವಿರುದ್ಧ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯ ಪಂದ್ಯದಲ್ಲಿ ಬಿಹಾರ ತಂಡವನ್ನು ಮುನ್ನಡೆಸುವ ಮೂಲಕ ಅವರು ಈ ಸಾಧನೆ ಮಾಡಿದರು. ತಮ್ಮ 15 ವರ್ಷ ಮತ್ತು 232 ದಿನಗಳ ವಯಸ್ಸಿನಲ್ಲಿ ವೈಭವ್ ಈ ಮೈಲಿಗಲ್ಲು ಸ್ಥಾಪಿಸಿದರು.

ಬೆಳೆ ವಿಮೆ ಪರಿಹಾರ ವಿತರಣೆಯಲ್ಲಿ ತಾರತಮ್ಯ: ಡಿಸಿಗೆ ಮನವಿ



ಶಿವಮೊಗ್ಗ: 2024–25 ಮತ್ತು 2025–26ನೇ ಸಾಲಿನ ಹವಾಮಾನ ಆಧಾರಿತ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಕಂಪನಿಯು ಅವೈಜ್ಞಾನಿಕವಾಗಿ ಬಿಡುಗಡೆ ಮಾಡಿದೆ ಎಂದು ಆರೋಪಿಸಿ 'ಶಿವಮೊಗ್ಗ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಒಕ್ಕೂಟ'ದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಕಳೆದ ಎರಡು ಸಾಲಿನಲ್ಲಿ ವಿಪರೀತ ಮಳೆ, ಬೇಸಿಗೆಯ ಬಿಸಿಲು ಮತ್ತು ಎಲೆಚುಕ್ಕೆ ರೋಗದಿಂದ ರೈತರು ಭಾರಿ ಬೆಳೆ ನಷ್ಟ ಅನುಭವಿಸಿದ್ದಾರೆ. ಆದರೆ, ವಿಮಾ ನಿರ್ವಹಣೆ ವಹಿಸಿಕೊಂಡಿರುವ 'ಅಗ್ರಿಕಲ್ಚರಲ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್' ನಷ್ಟವನ್ನು ಸಮರ್ಪಕವಾಗಿ ಅಂದಾಜಿಸದೆ ಕನಿಷ್ಠ ಪರಿಹಾರ ಬಿಡುಗಡೆ ಮಾಡಿ ಅನ್ಯಾಯ ಎಸಗಿದೆ ಎಂದು ದೂರಿದರು.

ದೇಶದ ಮೊದಲ ಕಾಲಿನ್ಸ್ ಏರೋಸ್ಪೇಸ್ ವಿಮಾನ ದುರಸ್ತಿ ಘಟಕಕ್ಕೆ ಭೂಮಿಪೂಜೆ



ಬೆಂಗಳೂರು:ದೇವನಹಳ್ಳಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಕಾಲಿನ್ಸ್ ಏರೋಸ್ಪೇಸ್ ಕಂಪನಿಯ ದೇಶದ ಮೊದಲ ವಿಮಾನ ನಿರ್ವಹಣೆ ಮತ್ತು ದುರಸ್ತಿ (ಎಂಆರ್‌ಒ) ಘಟಕ ನಿರ್ಮಾಣಕ್ಕೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಂಗಳವಾರ ಭೂಮಿಪೂಜೆ ನೆರವೇರಿಸಿದರು. ಈ ಘಟಕದಿಂದ ಸುಮಾರು 2,100 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಅವರು ತಿಳಿಸಿದರು. ಘಟಕ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು 26ಎಕರೆ ಭೂಮಿಯನ್ನು ಮಂಜೂರು ಮಾ ಡಿದೆ. ಜಾಗತಿಕ ಮಟ್ಟದ ಮೂಲ ಉಪಕರಣ ತಯಾರಿಕಾ ಕಂಪನಿಯೊಂದು ಭಾರತದಲ್ಲಿ ಸ್ಥಾಪಿಸುತ್ತಿರುವ ಈ ಮಾದರಿಯ ಮೊದಲ ಘಟಕ ಇದಾಗಿದೆ.

ಕೇಂದ್ರದ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಲು ಖಂಡ್ರೆ ಸೂಚನೆ



ಬೆಂಗಳೂರು: 15ನೇ ಹಣಕಾಸು ಆಯೋಗದ ಶಿಫಾರಸಿನ ಅಡಿಯಲ್ಲಿ ಬರಬೇಕಾದ 2,186.20 ಕೋಟಿ ರೂ. ಅನುದಾನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡದ ಹಿನ್ನೆಲೆಯಲ್ಲಿ, ಕೇಂದ್ರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ತೆರವು ಅರ್ಜಿ ಸಲ್ಲಿಸುವಂತೆ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಸಚಿವರು, ಅಗತ್ಯ ದಾಖಲೆಗಳನ್ನು ಸಲ್ಲಿಸಿ ಹಲವು ಬಾರಿ ಮನವಿ ಮಾಡಿದರೂ 2025–26ನೇ ಸಾಲಿನ ಅನುದಾನವನ್ನು ಕೇಂದ್ರ ಸರ್ಕಾರ ತಡೆಹಿಡಿದಿದೆ ಎಂದು ಆರೋಪಿಸಿದ್ದಾರೆ.

ಆಡಳಿತ ಮತ್ತು ಅಧಿಕಾರದಲ್ಲಿ ಮಹಿಳೆಯರಿಗೆ ಸಮಾನ ಪಾಲು ಅಗತ್ಯ: ಸ್ಪೀಕರ್ ಓಂ ಬಿರ್ಲಾ



ಬೆಂಗಳೂರು: ಮಹಿಳೆಯರಿಗೆ ಕೇವಲ ಸ್ಥಾನಮಾನ ನೀಡುವುದಷ್ಟೇ ಸಾಕಾಗುವುದಿಲ್ಲ, ಆಡಳಿತ ಮತ್ತು ಅಧಿಕಾರದಲ್ಲಿ ಸಮಾನ ಅವಕಾಶ ಕಲ್ಪಿಸುವ ಜವಾಬ್ದಾರಿಯನ್ನೂ ಹಂಚಿಕೊಳ್ಳಬೇಕು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪ್ರತಿಪಾದಿಸಿದರು. ಬೆಂಗಳೂರಿನಲ್ಲಿ ಮೊದಲ ಬಾರಿಗೆ ಆಯೋಜಿಸಲಾಗಿರುವ ಸಿಡಬ್ಲ್ಯುಪಿ ಸಮ್ಮೇಳನ 2026ರಲ್ಲಿ ಮಾತನಾಡಿದ ಅವರು, ಮಹಿಳೆಯರ ರಾಜಕೀಯ ಭಾಗವಹಿಸುವಿಕೆ, ನಾಯಕತ್ವ, ಡಿಜಿಟಲ್ ಸುರಕ್ಷತೆ ಹಾಗೂ ಸಾಂಸ್ಥಿಕ ಬೆಂಬಲದ ಮಹತ್ವವನ್ನು ಒತ್ತಿಹೇಳಿದರು. ಮಹಿಳೆಯರಿಗೆ ಸಮಾನ ಸ್ಥಾನ ನೀಡಿದ್ದ ಆ ಪ್ರಾಚೀನ ಪ್ರಜಾಪ್ರಭುತ್ವ ಪರಂಪರೆಯನ್ನು ಇಂದಿನ ವ್ಯವಸ್ಥೆಯಲ್ಲೂ ಅಳವಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಓಲಾ, ಉಬರ್ ಸೇರಿ ಎಲ್ಲಾ ಕ್ಯಾಬ್‌ಗಳಿಗೆ ಮೀಟರ್ ಕಡ್ಡಾಯ: ಸಚಿವ ಭೈರತಿ



ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಪ್ರಯಾ



ಮುಳಬಾಗಿಲಿನಲ್ಲಿ ಕನ್ನಡದ ಕಂಪು, ಚಿತ್ರರಂಗದ ಕಲರವ

ಶಾಸಕ ಹಾಗೂ ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ಅರ ಅದ್ದೂರಿ ಆಯೋಜನೆಯಲ್ಲಿ ಪ್ರೀ–ರಿಲೀಸ್ ಕಾರ್ಯಕ್ರಮ ಮತ್ತು ಕನ್ನಡ ರಾಜ್ಯೋತ್ಸವ ಸಂಭ್ರಮ – ನವೆಂಬರ್ 20ರಂದು ವಿಶ್ವದಾದ್ಯಂತ 'ಬೃಂದಾವಿಹಾರಿ' ಬಿಡುಗಡೆ ಮುಳಬಾಗಿಲಿನಲ್ಲಿ ಕನ್ನಡ ರಾಜ್ಯೋತ್ಸವದ ಸಂಭ್ರಮದೊಂದಿಗೆ ಗೋಲ್ಡನ್ ಮೆಗಾಸ್ಟಾರ್ ಗಣೇಶ್ ಅಭಿನಯದ ಬಹು ನಿರೀಕ್ಷಿತ 'ಬೃಂದಾವಿಹಾರಿ' ಚಿತ್ರದ ಪ್ರೀ–ರಿಲೀಸ್ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಸ್ಥಳೀಯ ಶಾಸಕ ಹಾಗೂ ಚಿತ್ರದ ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಈ ಸಮಾರಂಭಕ್ಕೆ ಕರುನಾಡ ಚಕ್ರವರ್ತಿ ಡಾ. ಶಿವರಾಜ್‌ಕುಮಾರ್ ಮುಖ್ಯ ಅತಿಥಿಯಾಗಿ ಆಗಮಿಸಿ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು. ಕನ್ನಡ ಚಿತ್ರರಂಗದ ಗಣ್ಯರು, ಕಲಾವಿದರು ಹಾಗೂ ಚಿತ್ರತಂಡದ ಸದಸ್ಯರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಶಿವರಾಜ್‌ಕುಮಾರ್, ಮುಳಬಾಗಿಲಿನೊಂದಿಗಿನ ತಮ್ಮ ಕುಟುಂಬದ ಆತ್ಮೀಯ ಒಡನಾಟವನ್ನು ಸ್ಮರಿಸಿದರು. ಮುಳಬಾಗಿಲಿನ ಆಂಜನೇಯ ಸ್ವಾಮಿ ದೇವಸ್ಥಾನ ತಮ್ಮ ತಂದೆ, ವರನಟ ಡಾ. ರಾಜ್‌ಕುಮಾರ್ ಅವರಿಗೆ ಅತ್ಯಂತ ಪ್ರಿಯವಾದ ಸ್ಥಳವಾಗಿತ್ತು ಎಂದು ನೆನಪಿಸಿಕೊಂಡರು. ಚೆನ್ನೈನಿಂದ ಬೆಂಗಳೂರಿಗೆ ಅಥವಾ ಬೆಂಗಳೂರಿನಿಂದ ಚೆನ್ನೈಗೆ ಪ್ರಯಾಣಿಸುವ ಸಂದರ್ಭದಲ್ಲಿ ದೇವ ಸ್ಥಾನಕ್ಕೆ ಭೇಟಿ ನೀಡಿ ಮುಳಬಾಗಿಲಿನ ಪ್ರಸಿದ್ಧ ದೋಸೆಯನ್ನು ಸವಿಯುತ್ತಿದ್ದ ದಿನಗಳ ನೆನಪುಗಳನ್ನು ಹಂಚಿಕೊಂಡರು. ಗೋಲ್ಡನ್ ಮೆಗಾ ಸ್ಟಾರ್ ಗಣೇಶ್ ತಮ್ಮ ಸಹೋದರನಿದ್ದಂತೆ. ನಿರ್ಮಾಪಕ ಸಮೃದ್ಧಿ ವಿ. ಮಂಜುನಾಥ್, ನಿರ್ದೇಶಕ ಶ್ರೀನಿವಾಸ ರಾಜು ಕೂಡಾ ಆತ್ಮೀಯರು. ಇಂತಹ ಆತ್ಮೀಯರ ಸಮಾಗಮದಲ್ಲಿ ಮೂಡಿಬಂದಿರುವ 'ಬೃಂದಾವಿಹಾರಿ' ಚಿತ್ರಕ್ಕೆ ಕನ್ನಡಿಗರು ಹಾಗೂ ಸಿನಿಪ್ರೇಮಿಗಳು ಪ್ರೀತಿ, ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.



ಡಿಸೆಂಬರ್ 11ಕ್ಕೆ 'ಹುಬ್ಬಳ್ಳಿ ಹಂಟರ್ಸ್' ರಿಲೀಸ್

ಉತ್ತರ ಕರ್ನಾಟಕದ ವಿಶಿಷ್ಟ ಭಾಷಾ ಸೊಗಡು ಮತ್ತು ಹಾಸ್ಯದ ಹಿನ್ನೆಲೆಯನ್ನಿಟ್ಟುಕೊಂಡು ತಯಾರಾಗಿರುವ ಬಹುನಿರೀಕ್ಷಿತ 'ಹುಬ್ಬಳ್ಳಿ ಹಂಟರ್ಸ್' ಸಿನಿಮಾದ ಬಿಡುಗಡೆ ದಿನಾಂಕ ಅಧಿಕೃತವಾಗಿ ಘೋಷಣೆಯಾಗಿದೆ. ಬರುವ ಡಿಸೆಂಬರ್ 11ರಂದು ಈ ಚಿತ್ರ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಇತ್ತೀಚೆಗಷ್ಟೇ 'ರಿಷಬ್ ಶೆಟ್ಟಿ ಮ್ಯೂಸಿಕ್' ಆಡಿಯೋ ಸಂಸ್ಥೆಯ ಮೂಲಕ ಬಿಡುಗಡೆಯಾಗಿದ್ದ ಚಿತ್ರದ ಮೊದಲ ಹಾಡು ದೊಡ್ಡ ಮಟ್ಟದಲ್ಲಿ ಹಿಟ್ ಆಗಿ ಪ್ರೇಕ್ಷಕರ ಗಮನ ಸೆಳೆದಿದೆ. ಇದರ ಬೆನ್ನಲ್ಲೇ ಚಿತ್ರತಂಡದಿಂದ ಮತ್ತೊಂದು ಮಹತ್ವದ ಅಪ್‌ಡೇಟ್ ಹೊರಬಿದ್ದಿದ್ದು, ಸ್ಯಾಂಡಲ್‌ವುಡ್‌ನ ಪ್ರತಿಷ್ಠಿತ ವಿತರಕ ಜಯಣ್ಣ ಅವರು ಈ ಚಿತ್ರವನ್ನು ರಾಜ್ಯಾದ್ಯಂತ ವಿತರಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಬ್ಲಾಕ್‌ಬಸ್ಟರ್ 'ಪ್ರೇಮದ ಊರಲಿ' ಸಿನಿಮಾವನ್ನು ವಿತರಣೆ ಮಾಡಿ ಭರ್ಜರಿ ಯಶಸ್ಸು ಕಂಡಿರುವ ಜಯಣ್ಣ ಅವರು ಇದೀಗ 'ಹುಬ್ಬಳ್ಳಿ ಹಂಟರ್ಸ್' ತಂಡದೊಂದಿಗೆ ಕೈಜೋಡಿಸಿರುವುದು ಚಿತ್ರಕ್ಕೆ ದೊಡ್ಡ ಬಲ ತಂದಂತಾಗಿದೆ. ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕರಾಗಿ ಹಾಗೂ ವಿತರಕರಾಗಿ ದಶಕಗಳಿಂದ ದೊಡ್ಡ ಹೆಸರು ಮಾಡಿರುವ ಜಯಣ್ಣ ಫಿಲ್ಮ್ಸ್ ಸಂಸ್ಥೆಯ ಮೂಲಕ ಈ ಸಿನಿಮಾ ಬಿಡುಗಡೆಯಾಗುತ್ತಿರುವುದರಿಂದ, ರಾಜ್ಯದ ಮೂಲೆಮೂಲೆಗೂ ಚಿತ್ರವನ್ನು ಅತ್ಯುತ್ತಮವಾಗಿ ತಲುಪಿಸುವಲ್ಲಿ ಯಾವುದೇ ಅನುಮಾನವಿಲ್ಲ ಎಂಬ ವಿಶ್ವಾಸ ಚಿತ್ರತಂಡದಲ್ಲಿದೆ. ಗೋಲ್ಡನ್ ಹಾರ್ಸ್ ಸಿನಿಮಾ ಬ್ಯಾನರ್ ಅಡಿಯಲ್ಲಿ ಸಂತೋಷ್ ಕುಮಾರ್ ಕೆ.ಸಿ. ನಿರ್ಮಿಸಿರುವ ಈ ಚಿತ್ರಕ್ಕೆ ಸಮರ್ಥ್ ಬಿ. ಕಡಕೋಳ್ ಕಥೆ, ಚಿತ್ರಕಥೆ ಬರೆದು ಆಕ್ಷನ್–ಕಟ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವಿಭಿನ್ನ ಶೈಲಿಯ ಮೂಲಕ ಜನಪ್ರಿಯತೆ ಗಳಿಸಿರುವ ಪ್ರತಿಭಾವಂತ ಕಂಟೆಂಟ್ ಕ್ರಿಯೇಟರ್ಸ್ ತಂಡವೊಂದು ಈ ಸಿನಿಮಾದ ಮೂಲಕ ಬೆಳ್ಳಿತೆರೆಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದೆ. ಧಾರವಾಡ ಮತ್ತು ಸುತ್ತಮುತ್ತಲಿನ ಸುಂದರ ತಾಣಗಳಲ್ಲಿ ಈ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದ್ದು, ಉತ್ತರ ಕರ್ನಾಟಕದ ನೈಜ ಸೊಗಡನ್ನು ತೆರೆಯ ಮೇಲೆ ತರಲಾಗಿದೆ.



'ದಿಯಾ' ಜೋಡಿಯೊಂದಿಗೆ 'ಫ್ರೆಂಡ್ಸ್ & ಫ್ಯಾಮಿಲಿಸ್' ಫಸ್ಟ್‌ಲುಕ್

'6–5=2' ಹಾಗೂ ಸೂಪರ್ ಹಿಟ್ 'ದಿಯಾ' ಚಿತ್ರಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ನಿರ್ದೇಶಕ ಕೆ.ಎಸ್.ಅಶೋಕ ಇದೀಗ ತಮ್ಮ ಮುಂದಿನ ಮಹತ್ವಾಕಾಂಕ್ಷಿ ಸಿನಿಮಾವನ್ನು ಘೋಷಿಸಿದ್ದಾರೆ. 'ಫ್ರೆಂಡ್ಸ್ & ಫ್ಯಾಮಿಲಿಸ್' ಎಂಬ ಆಕರ್ಷಕ ಶೀರ್ಷಿಕೆಯೊಂದಿಗೆ ಮೂಡಿಬರುತ್ತಿರುವ ಈ ಚಿತ್ರದ ಫಸ್ಟ್ ಲುಕ್ ಮತ್ತು ಟೈಟಲ್ ಇಂದು ಅಧಿಕೃತವಾಗಿ ಲಾಂಚ್ ಆಗಿದೆ. ವಿಶೇಷವೆಂದರೆ, 'ದಿಯಾ' ಚಿತ್ರದ ಯಶಸ್ವಿ ಜೋಡಿಯಾದ ಪೃಥ್ವಿ ಅಂಬಾರ್ ಮತ್ತು ದೀಕ್ಷಿತ್ ಶೆಟ್ಟಿ ಈ ಸಿನಿಮಾದಲ್ಲಿ ಮತ್ತೆ ಒಂದಾಗಿದ್ದು, ಇವರೊಂದಿಗೆ ನವ ಪ್ರತಿಭೆ ನಿವೀನ್ (ಶ್ರೀಧರ್) ಮತ್ತು ಆಯಿಷಾ ಪ್ರಮುಖ ಪಾತ್ರಗಳಲ್ಲಿ ಬಣ್ಣ ಹಚ್ಚಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ನಿರ್ದೇಶಕ ಅಶೋಕ ಕೆ.ಎಸ್., 'ಫ್ರೆಂಡ್ಸ್ & ಫ್ಯಾಮಿಲಿಸ್' ಮೂವರು ಗೆಳೆಯರು ಮತ್ತು ಅವರ ಕುಟುಂಬಗಳ ಸುತ್ತ ನಡೆಯುವ ಒಂದು ಹಾಸ್ಯಾತ್ಮಕ ಸೋಶಿಯಲ್ ಡ್ರಾಮಾ. 'ದಿಯಾ' ಚಿತ್ರದಲ್ಲಿ ನಾಯಕಿಯ ಪಾತ್ರಕ್ಕೆ ಇದ್ದಂತಹ ಭಾವನಾತ್ಮಕ ಪಯಣ ಈ ಚಿತ್ರದ ಮೂರು ಪ್ರಮುಖ ಪಾತ್ರಗಳಿಗೂ ಇದೆ. ಪ್ರೇಕ್ಷಕರು ಸಿನಿಮಾ ನೋಡುವಾಗ ತಮ್ಮದೇ ಜೀವನದ ಘಟನೆಗಳನ್ನು ಕನ್ನಡಿಯಂತೆ ಕಾಣುವಷ್ಟು ಸಹಜವಾಗಿ ಪಾತ್ರಗಳನ್ನು ರೂಪಿಸಲಾಗಿದೆ. ನನ್ನ ಹಿಂದಿನ ಸಿನಿಮಾಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಹೆಚ್ಚು ಪ್ರಬುದ್ಧವಾದ ಕಥೆ ಹಾಗೂ ಪಾತ್ರಗಳ ಆಳವನ್ನು ಕಟ್ಟಿಕೊಡಲಾಗಿದೆ. ಪ್ರತಿಯೊಬ್ಬ ಕಲಾವಿದರೂ ತಮ್ಮ ಕಂಫರ್ಟ್ ಜೋನ್‌ನಿಂದ ಹೊರಬಂದು ನೂರಕ್ಕೆ ನೂರರಷ್ಟು ಶ್ರಮ ಹಾಕಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.



'ನರಿ ಕಥೆ' ಹೇಳಲು ಹೊರಟ ದಯಾಳ್ ಪದ್ಮನಾಭನ್

ಡಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ 'ನರಿ ಕಥೆ' ಚಿತ್ರಕ್ಕೆ ದಯಾಳ್ ಪದ್ಮನಾಭನ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. 'ಆ ಕರಾಳ ರಾತ್ರಿ' ಚಿತ್ರದ ಬಳಿಕ ಸುಮಾರು ಮೂರು ವರ್ಷಗಳ ನಂತರ ಅವರು ಕನ್ನಡ ಚಿತ್ರ ನಿರ್ಮಾಣಕ್ಕೆ ಮರಳಿದ್ದಾರೆ. ವಿಭಿನ್ನ ಕಥಾಹಂದರ ಹಾಗೂ ಪಾತ್ರಗಳಿಗೆ ಹೆಚ್ಚಿನ ಮಹತ್ವ ನೀಡಿರುವ ಈ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಕರ್ನಾಟಕದಲ್ಲೇ ಮೊದಲ ಬಾರಿಗೆ ಸಿನಿಮಾ ನಿರ್ಮಾಣ ಮತ್ತು ಪೋಸ್ಟ್ ಪ್ರೊಡಕ್ಷನ್‌ನ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ಅತ್ಯಾಧುನಿಕ ತಂತ್ರಜ್ಞಾನದ ಸಮಗ್ರ ಸ್ಟುಡಿಯೋ 'ದಿ ಮೀಡಿಯಾ ಹೌಸ್' ಇತ್ತೀಚೆಗೆ ಉದ್ಘಾಟನೆಗೊಂಡಿತು. ದೊಡ್ಡ ಬಜೆಟ್ ಸಿನಿಮಾಗಳಿಂದ ಕಿರುಚಿತ್ರಗಳವರೆಗೆ ವೆಬ್‌ಸಿರೀಸ್‌ನಿಂದ ಜಾಹೀರಾತು ಚಿತ್ರಗಳವರೆಗೆ ಎಲ್ಲ ರೀತಿಯ ಸಿನಿಮಾ ಮತ್ತು ಮೀಡಿಯಾ ಪ್ರಾಜೆಕ್ಟ್‌ಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒಂದೇ ಸೂರಿನಡಿ ಕಲ್ಪಿಸಿರುವುದು ಈ ಸ್ಟುಡಿಯೋದ ವಿಶೇಷತೆ. ಇಂತಹ ಸಮಗ್ರ ತಾಂತ್ರಿಕ ಸೌಲಭ್ಯಗಳಿಗಾಗಿ ಈ ಹಿಂದೆ ಚೆನ್ನೈ ಅಥವಾ ಹೈದರಾಬಾದ್‌ಗೆ ತೆರಳಬೇಕಾದ ಪರಿಸ್ಥಿತಿಯಿತ್ತು. ಕನ್ನಡ ಚಿತ್ರರಂಗದ ನಿರ್ಮಾಪಕರು, ನಿರ್ದೇಶಕರು ಹಾಗೂ ತಂತ್ರಜ್ಞರಿಗೆ ಕರ್ನಾಟಕದಲ್ಲೇ ವಿಶ್ವಮಟ್ಟದ ಸೌಲಭ್ಯಗಳು ದೊರೆಯಬೇಕು ಎಂಬ ಉದ್ದೇಶದಿಂದಈ ಸ್ಟುಡಿಯೋವನ್ನು ರೂಪಿಸಲಾಗಿದೆ.





ಮಾರಿಗೆ ದಾರಿ ಟ್ರೈಲರ್ ಬಿಡುಗಡೆ

'ಮಾರಿಗೆ ದಾರಿ' ಚಿತ್ರದ ಟ್ರೇಲರನ್ನು ನಟ ಶ್ರೇಯಸ್‌ಮಂಜು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಬೆಂಗಳೂರು ಮೂಲದ ಯುವ ಪ್ರತಿಭೆ ಅಗಸ್ತ್ಯ ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ ಜತೆಗೆ ನಾಯಕನಾಗಿ ಅಭಿನಯಿಸಿದ್ದಾರೆ. ರಾಧ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ರಾಧ ಬಂಡವಾಳ ಹೂಡಿದ್ದಾರೆ. ಐದಾರು ಸಿನಿಮಾಗಳಲ್ಲಿ ನಟಿಸಿ, ಸದ್ಯ 'ಲಕ್ಷೀ ನಿವಾಸ' ಧಾರವಾಹಿಯಲ್ಲಿ ಬ್ಯುಸಿ ಇರುವ ಮಹಾಲಕ್ಷೀ ನಾಯಕಿ. ಉಳಿದಂತೆ ಕಾಕ್ರೋಚ್ ಸುಧಿ, ಬಲರಾಜವಾಡಿ, ಬೆನಕ ನಂಜಪ್ಪ, ವರ್ಧನ್, ಪ್ರದೀಪ್‌ಪೂಜಾರಿ, ಮಂಡ್ಯ ಸ್ಟಾರ್ ಅನಂತಕುಮಾರ್, ತಾರಕ ರಾಮ್, ನವಾಜ್ ಮುಂತಾದವರು ಅಭಿನಯಿಸಿದ್ದಾರೆ. ಕಿನ್ನಾಳ್‌ರಾಜ್–ಪ್ರಮೋದ್‌ಮರವಂತೆ–ತ್ರಿಲೋಕ ತ್ರಿವಿಕ್ರಮ ಸಾಹಿತ್ಯದ ನಾಲ್ಕು ಗೀತೆಗಳಿಗೆ ರಿಯೋಆಂಟೋನಿ ಸಂ ಗೀತ ಸಂಯೋಜಿಸಿದ್ದಾರೆ. ಜಗದೀಶ್ ಗೌಡ ಛಾಯಾಗ್ರಹಣ ಮತ್ತು ಸಂಕಲನ, ಸಾಹಸ ಸೈಕ್ ಸೂರಿ ಅವರದಾಗಿದೆ. ಟೈಮ್ ಅನ್ನೋದು ಒಂದು ಖಾಯಿಲೆ ಇದ್ದ ಹಾಗೆ. ಯಾವನು ಆದ್ರೆ ನನಗೇನು, ಕಣ್ಣಿಗೆ ಕಾಣಿಸಿಕೊಂಡರೆ ಕಾಲುಗಳು ಇರೋಲ್ಲ. ನನಗೆ ಹುಚ್ಚು ಹಿಡಿದಿದೆ. ಮತ್ತೆ ರಕ್ತ ನೋಡಬೇಕು ಅನಿಸಿದೆ ಇಂತಹ ಪವರ್‌ಫುಲ್ ಮಾಸ್ ಸ್ಯಾಂಪಲ್ ಡೈಲಾಗ್‌ಗಳು ತುಣುಕುಗಳಲ್ಲಿ ಕಾಣಿಸಿಕೊಂಡವು ಎಂದರು.



'ಭಲೇ ಹುಚ್ಚ' ಅಭಿಮಾನಿಯ ಕಥೆ

ಬಾಲಾಜಿ ಸಿನಿ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಹೆಚ್.ಕೆ. ಶಿವಪ್ರಕಾಶ್ ನಿರ್ಮಿಸಿರುವ 'ಭಲೇ ಹುಚ್ಚ' ಚಿತ್ರದ ಹಾಡಿನ ಬಿಡುಗಡೆ ಸಮಾರಂಭ ನಡೆಯಿತು. ಈ ಹಿಂದೆ ಕಾಲ್ಗೆಜ್ಜೆ ಎಂಬ ಚಿತ್ರ ನಿರ್ದೇಶಿಸಿದ್ದ ಎಸ್. ಬಂಗಾರು, ಬಹಳ ದಿನಗಳ ಗ್ಯಾಪ್ ನಂತರ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. 'ಡಾ.ರಾಜ್ ಅಭಿಮಾನಿ' ಎಂಬ ಅಡಿಬರಹ ಈ ಚಿತ್ರಕ್ಕಿದ್ದು, ಅಣ್ಣಾವ್ರ ಅಭಿಮಾನಿಯೊಬ್ಬನ ಕಥೆಯನ್ನ ನಿರ್ದೇಶಕರು ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಆರ್ಮುಗಂ ರವಿಶಂಕರ್, ಭವ್ಯ, ತಬಲ ನಾಣಿ, ಅವಿನಾಶ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಹಾಡನ್ನು ಹಿರಿಯ ನಿರ್ದೇಶಕ ಎಸ್. ಮಹೇಂದರ್ ಅವರು ಬಿಡುಗಡೆಗೊಳಿಸಿ ಮಾತನಾಡುತ್ತ ಕನ್ನಡದ ಮೇಲಿನ ಅಭಿಮಾನದ ಹಾಡು ಚೆನ್ನಾಗಿ ಬಂದಿದೆ. ಭಲೇ ಹುಚ್ಚ ಹೆಸರೇ ಸರ್ವಕಾಲಿಕ. ಬಂಗಾರು ನನ್ನ ಶಿಷ್ಯ, ತುಂಬಾ ವರ್ಷ ಕಾದು ಮತ್ತೊಂದು ಚಿತ್ರ ಮಾಡಿದ್ದಾರೆ. ನಿರ್ದೇಶಕನಿಗೆ ತಾಳ್ಮೆ ಬಹಳ ಮುಖ್ಯ. ಅದು ಬಂಗಾರು ಅವರಿಗಿದೆ, ಈ ಚಿತ್ರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಚಿತ್ರದ ನಿರ್ಮಾಪಕ ಹೆಚ್.ಕೆ. ಶಿವಪ್ರಕಾಶ್ ಮಾತನಾಡಿ ಡಾ.ರಾಜ್‌ಕುಮಾರ್ ಅಂದ್ರೆ ಕೇವಲ ನಟರಲ್ಲ, ಕನ್ನಡಿಗರ ಭಾವನೆ ಎಂದರು.



ಅತ್ಯಾಧುನಿಕ ತಂತ್ರಜ್ಞಾನದ ಸಮಗ್ರ ಸ್ಟುಡಿಯೋ 'ದಿ ಮೀಡಿಯಾ ಹೌಸ್'

ಸತ್ಯ ಇನ್ ಸೌಜನ್ಯ ಪೋಸ್ಟರ್ ಬಿಡುಗಡೆ

ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿಕೊಂಡು ಸಿದ್ದಪಡಿಸಿರುವ 'ಸತ್ಯ ಇನ್ ಸೌಜನ್ಯ' ಚಿತ್ರದ ಪೋಸ್ಟರ್‌ನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿ ತಂಡಕ್ಕೆ ಶುಭ ಹಾರೈಸಿದ್ದಾರೆ. ರಾಜಕೀಯದಲ್ಲಿ ಬ್ಯುಸಿ ಇದ್ದರೂ ಸಮಯ ಬಿಡುವು ಮಾಡಿಕೊಂಡು ಚಿತ್ರದ ತಿರುಳನ್ನು ಆಲಿಸಿ ಚೆನ್ನಾಗಿದೆ. ಬಿಡುಗಡೆಯಾದಾಗ ನನಗೂ ತಿಳಿಸಿ, ನೋಡುವೆನು ಎಂದು ಚಿತ್ರತಂಡದ ಪ್ರಯತ್ನಕ್ಕೆ ಪ್ರೋತ್ಸಾಹ ನೀಡಿರುವುದು ಟೀಂಗೆ ಶಕ್ತಿ ಬಂದಂತೆ ಆಗಿದೆ. ಯಾದಗಿರಿ ಮೂಲದ ಭಾನುಪ್ರಕಾಶ್ ಅವರು ಮಹದೇವ್ ಫಿಲಂ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣ, ಕಥೆ ಮತ್ತು ನಿರ್ದೇಶನ ಮಾಡುವ ಜತೆಗೆ ನಾಯಕನಾಗಿ ನಟಿಸುತ್ತಿದ್ದಾರೆ. ಈ ಹಿಂದೆ ತೆರೆ ಕಂಡ 'ಸೈದಾಪುರ' ಹಾಗೂ ಬಿಡುಗಡೆಯಾಗಬೇಕಾದ 'ಅಂತಿಮಯಾತ್ರೆ' ಚಿತ್ರಗಳು ಇದೇ ಸಂಸ್ಥೆಯಿಂದ ನಿರ್ಮಾಣಗೊಂಡಿದ್ದವು. ಪ್ರಸಕ್ತ ಸಮಾಜದಲ್ಲಿ ನಡೆದ ಕೆಲವು ನೈಜ ಘಟನೆಗಳನ್ನು ಆಧರಿಸಿ, ಅದಕ್ಕೆ ಕಮರ್ಷಿಯಲ್ ಟಚ್ ನೀಡಿ ಚಿತ್ರಕಥೆ ಬರೆಯಲಾಗಿದೆ.



ತಂದೆ–ಮಗನ ಬಾಂಧವ್ಯದ ಕಥೆ 'ಬೆಲ್ ಬಟನ್' ನ. 27ಕ್ಕೆ ತೆರೆಗೆ

ಪ್ರೀತಿ, ಕುಟುಂಬದ ಬಾಂಧವ್ಯ ಹಾಗೂ ತಂದೆ–ತಾಯಿಯ ಕನಸುಗಳನ್ನು ಮನಮುಟ್ಟುವ ರೀತಿಯಲ್ಲಿ ಕಟ್ಟಿಕೊಟ್ಟಿರುವ 'ಬೆಲ್ ಬಟನ್' ಚಿತ್ರ ನವೆಂಬರ್ 27ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಈಗಾಗಲೇ ಚಿತ್ರದ ಹಾಡುಗಳು, ಟೀಸರ್ ಗಮನ ಸೆಳೆದಿದ್ದು ಇದೀಗ ಬಿಡುಗಡೆಯಾಗಿರುವ ಟ್ರೈಲರ್ ಕೂಡ ಪ್ರೇಕ್ಷಕರಲ್ಲಿ ಚಿತ್ರದ ಮೇಲಿನ ನಿರೀಕ್ಷೆಯನ್ನು ಹೆಚ್ಚಿಸಿದೆ. ಅದರಲ್ಲೂ ಈಗಾಗಲೇ ಬಿಡುಗಡೆಯಾಗಿರುವ 'ಸಿಂಹ ರಾಶಿ' ಹಾಗೂ 'ಸಂಜೆ ಓಡುವ ಸಮಯ' ಹಾಡುಗಳು ಮೆಚ್ಚುಗೆಗೆ ಪಾತ್ರವಾಗಿವೆ. ಮಧ್ಯಮವರ್ಗದ ತಂದೆಯೊಬ್ಬನಿಗೆ ತನ್ನ ಮಗ ಪ್ರೇಮವಿವಾಹವಾಗಬೇಕು ಎಂಬ ಬಹುದಿನಗಳ ಆಸೆ. ಮಗ ಚಿರು ಪ್ರೀತಿಯಲ್ಲಿ ಬಿದ್ದಿದ್ದಾನೆ ಎಂಬ ವಿಷಯ ತಿಳಿದಾಗ ತಂದೆಗೆ ಎಲ್ಲಿಲ್ಲದ ಸಂತೋಷ. ಆದರೆ ಆತ ಪ್ರೀತಿಸಿದ ಹುಡುಗಿ ಪ್ರೀತಿಯನ್ನು ನಿರಾಕರಿಸಿದಾಗ ಕಥೆ ಅನಿರೀಕ್ಷಿತ ತಿರುವು ಪಡೆದುಕೊಳ್ಳುತ್ತದೆ.



'ಜಾಕಿ–42' ಡಿಸೆಂಬರ್ 18ಕ್ಕೆ ತೆರೆಗೆ

ಗುರುತೇಜ್ ಶೆಟ್ಟಿ ನಿರ್ದೇಶನದಲ್ಲಿ, ಕಿರಣ್ ರಾಜ್ ನಾಯಕನಾಗಿ ಅಭಿನಯಿಸಿರುವ ಬಹುನಿರೀಕ್ಷಿತ ಕನ್ನಡ ಸಿನಿಮಾ 'ಜಾಕಿ–42' ಇದೇ ಡಿಸೆಂಬರ್ 18ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಜಯಣ್ಣ ಫಿಲ್ಮ್ಸ್ ಈ ಚಿತ್ರವನ್ನು ವಿತರಣೆ ಮಾಡುತ್ತಿದ್ದು, ಬಿಡುಗಡೆಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಭಾರತಿ ಸತ್ಯನಾರಾಯಣ ನಿರ್ಮಾಣದಲ್ಲಿ ಗೋಲ್ಡನ್ ಗೇಟ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಕುದುರೆ ರೇಸ್‌ನ ರೋಚಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಕಥೆ ಹೆಣೆಯಲಾಗಿದ್ದು, ಅದರೊಂದಿಗೆ ಕೌಟುಂಬಿಕ ಭಾವನೆಗಳಿಗೂ ವಿಶೇಷ ಆದ್ಯತೆ ನ



ಎಸ್. ನಾರಾಯಣ್ ಅವರ ನೂತನ ಚಿತ್ರ?



ಕಲಾಸಾಮ್ರಾಟ್ ಡಾ॥ಎಸ್. ನಾರಾಯಣ್ ಅವರ ನಿರ್ದೇಶನದ ನೂತನ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಸರಳವಾಗಿ ನೆರವೇರಿತು. ದೇವರ ಮೇಲೆ ಸೆರೆ ಹಿಡಿಯಲಾದ ಮೊದಲ ಸನ್ನಿವೇಶಕ್ಕೆ ಶ್ರೀಮತಿ ಲತಾ ಜಯಪ್ರಕಾಶ್ ಅವರು ಆರಂಭ ಫಲಕ ತೋರಿದರೆ, ಶ್ರೀಮತಿ ಭಾಗ್ಯವತಿ ಎಸ್. ನಾರಾಯಣ್ ಅವರು ಕ್ಯಾಮೆರಾ ಚಾಲನೆ ಮಾಡಿದರು. ಕ್ರಿಯೇಟಿವ್ ಪ್ರೊಡ್ಯೂಸರ್ ಅಜಯ್ ಹಾಗೂ ಪ್ರೊಡಕ್ಷನ್ ಹೆಡ್ ಪುಷ್ಪಮಾಲ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ನೂತನ ಚಿತ್ರಕ್ಕೆ ವಿ.ಹರಿಕೃಷ್ಣ ಅವರು ಸಂಗೀತ ಸಂಯೋಜಿಸುತ್ತಿದ್ದು, ಎಸ್. ನಾರಾಯಣ್ ಹಾಗೂ ವಿ. ಹರಿಕೃಷ್ಣ ಅವರ ಕಾಂಬಿನೇಷನ್‌ನಲ್ಲಿ ಮೂಡಿ ಬರುತ್ತಿರುವ ಮೊದಲ ಚಿತ್ರ ಇದಾಗಿದೆ. ಗಿರಿಧರ್ ದಿವಾನ್ ಛಾಯಾಗ್ರಹಣ, ಶಿವ ಪ್ರಸಾದ್ ಯಾದವ ಸಂಕಲನ ಈ ಚಿತ್ರಕ್ಕಿದೆ.

ಡಿ.4 ರಂದು ತೆರೆಗೆ ಬರಲಿದೆ 'ದೇವಿ ಮಹಾತ್ಮೆ'..



ನಟ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ 'ದೇವಿ ಮಹಾತ್ಮೆ' ಚಿತ್ರವು ಡಿಸೆಂಬರ್ 4ರಂದು ವಿಶ್ವದಾದ್ಯಂತ ಚಿತ್ರ ಮಂದಿರಗಳಲ್ಲಿ ತೆರೆಕಾಣಲಿದೆ. ಈ ಚಿತ್ರಕ್ಕೆ ಸ್ಯಾಂಡಲ್‌ವುಡ್‌ನ ಎರಡು ಪ್ರತಿಷ್ಠಿತ ಸಂಸ್ಥೆಗಳ ಬೆಂಬಲ ಸಿಕ್ಕಿರುವುದು ವಿಶೇಷವಾಗಿದೆ. ಮೊದಲಿಗೆ ಈ ಚಿತ್ರದ ಆಡಿಯೋ ಹಕ್ಕುಗಳನ್ನು ಪ್ರತಿಷ್ಠಿತ 'ಹೊಂಬಾಳೆ ಮ್ಯೂಸಿಕ್' ಸಂಸ್ಥೆ ಪಡೆದುಕೊಂಡಿತ್ತು. ಇದೀಗ ಮತ್ತೊಂದು ಪ್ರತಿಷ್ಠಿತ ಸಂಸ್ಥೆಯಾದ 'ಕೆಆರ್‌ಜಿ ಸ್ಟುಡಿಯೋಸ್' ಈ ಚಿತ್ರದ ವಿತರಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ನಾಗರಾಜ ಸೋಮಯಾಜಿ ನಿರ್ದೇಶನದ ಈ ಚಿತ್ರಕ್ಕೆ 'ಯುವಿಜಿ ಸ್ಟುಡಿಯೋ' ಬ್ಯಾನರ್‌ನಡಿಯಲ್ಲಿ ವಿದ್ಯಾ ಗಾಂಧಿರಾಜನ್ ಬಂಡವಾಳ ಹೂಡಿದ್ದು, ಗಾಂಧಿರಾಜನ್ ನಿರ್ಮಾಣದ ದೇವಿ ಮಹಾತ್ಮೆ' ಡಿಸೆಂಬರ್ 4ರಂದು ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದೆ.

'ಕೌಂತೇಯ' ಚಿತ್ರದ ಹಾಡು ಬಿಡುಗಡೆ..

ಕುಂಭರಾಶಿ, ಕಾಗೆಮೊಟ್ಟೆ ಖ್ಯಾತಿಯ ಬಿ.ಕೆ. ಚಂದ್ರಹಾಸ್ ಅವರ ನಿರ್ದೇಶನದ ಮತ್ತೊಂದು ಎಮೋಷನಲ್, ಥ್ರಿಲ್ಲರ್ ಚಿತ್ರ 'ಕೌಂತೇಯ' ಶ್ರೀ ಮಹಾಂಕಾಳಿ ಪಿಕ್ಚರ್ಸ್ ಅಡಿ ಜಿ. ಸುರೇಶ್ ಕುಮಾರ್ ಅವರು ನಿರ್ಮಿಸಿರುವ ಈ ಚಿತ್ರದ 'ಚಿಗುರೆಲೆಯ ತುದಿಯ ಮೇಲೆ' ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಿರ್ದೇಶಕರೇ ರಚಿಸಿರುವ ಈ ಹಾಡಿಗೆ ಸಂಚಿತ್ ಹೆಗ್ಡೆ ದನಿಯಾಗಿದ್ದಾರೆ. ಈ ಚಿತ್ರದಲ್ಲಿ ಹಿರಿಯನಟ ಅಚ್ಯುತ್ ಕುಮಾರ್ ಸಬ್–ಇನ್ಸ್‌ಪೆಕ್ಟರ್ ರಂಗನಾಥನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮನೋರಂಜನ್ ರವಿಚಂದ್ರನ್ ಇದೇ ಮೊದಲ ಬಾರಿಗೆ ನೆಗೆಟಿವ್ ಶೇಡ್ ಇರುವ ಪಾತ್ರವನ್ನೂ ಬಿಗ್‌ಬಾಸ್ ಖ್ಯಾತಿಯ ಪ್ರಿಯಾಂಕ ತಿಮ್ಮೇಶ್ ಎಸಿಪಿ ಪಾತ್ರದಲ್ಲೂ ಕಾಣಿಸಿಕೊಂಡಿದ್ದಾರೆ. 'ಕೌಂತೇಯ' ಕುಂತೀ ಪುತ್ರ ಕರ್ಣನ ಇನ್ನೊಂದು ಹೆಸರಾದರೂ, ಇದು ಪೌರಾಣಿಕ ಕಥೆಯಲ್ಲ, ಮರ್ಡರ್ ಮಿಸ್ಟ್ರಿ ಆಧಾರಿತ ಚಿತ್ರ.




'ರಾಮ್ ರಹೀಮ್' ಚಿತ್ರದ ಟ್ರೇಲರ್ ಬಿಡುಗಡೆ..

ನಮ್ ಋಷಿ ಅವರ ಕಥೆ, ಚಿತ್ರಕಥೆ, ಸಾಹಿತ್ಯ ಹಾಗೂ ಸಂಗೀತ ಸಂಯೋಜನೆಯೊಂದಿಗೆ ಅವರೇ ನಿರ್ಮಿಸಿ ನಿರ್ದೇಶಿಸಿರುವ 'ರಾಮ್ ರಹೀಮ್' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಹೆಸರಾಂತ ನಿರ್ಮಾಪಕ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷ ಕೆ. ಮಂಜು ಅವರು ಟ್ರೇಲರ್ ಬಿಡುಗಡೆ ಮಾಡಿ ಚಿತ್ರ ತಂಡಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕೆ. ಮಂಜು ಅವರು, ತಮ್ಮ ಆತ್ಮೀಯ ಸ್ನೇಹಿತ ನಮ್ ಋಷಿ ಒಳ್ಳೆಯ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಟ್ರೇಲರ್ ತುಂಬಾ ಚೆನ್ನಾಗಿ ಮೂಡಿ ಬಂದಿದ್ದು, ಚಿತ್ರದ ಕೆಲಸ, ಕಲಾವಿದರ ಅಭಿನಯ ಹಾಗೂ ಲೊಕೇಷನ್‌ಗಳು ಆಕರ್ಷಕವಾಗಿವೆ. ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿದ್ದಾರೆ. ಋಷಿಗೆ ಭಗವಂತ ಒಳ್ಳೆಯ ಯಶಸ್ಸು ನೀಡಲಿ. ಮುಂದಿನ ಚಿತ್ರ ಮಾಡುವ ಶಕ್ತಿ ದೊರೆಯಲಿ. ಅವರ ಬೆನ್ನೆಲುಬಾಗಿ ನಾವೆಲ್ಲರೂ ಇರುತ್ತೇವೆ ಎಂದು ಬೆಂಬಲ ವ್ಯಕ್ತಪಡಿಸಿದರು.







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021